# ಉನ್ನತ ಪ್ರಾಥಮಿಕ ಹಂತದಲ್ಲಿ ಭಾಷೆ ಮತ್ತು ಇತರೆ ವಿಷಯಗಳು

**ಹೃದಯಕಾಂತ ದೀವಾನ**

ಪ್ರಾಥಮಿಕ ಹಂತದಲ್ಲಿ ಭಾಷಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಬಹಳಷ್ಟು ಬರೆಯಲಾಗಿದೆ. ಇದರಿಂದಾಗಿ ಭಾಷಾ ಶಿಕ್ಷಣದ ವಿಷಯದಲ್ಲಿ ಅನೇಕ ಮಗ್ಗುಲುಗಳ ಬಗ್ಗೆ ಸ್ಪಷ್ಟವಾಗಿ ತಿಳಿದಿದೆ ಹಾಗೂ ಅದರ ಕುರಿತಾಗಿ ಕನಿಷ್ಠ ಪಕ್ಷ ಹಲವು ಕಡೆ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳ ಹಂತದ ಬಗ್ಗೆ ಲಕ್ಷ್ಯ ವಹಿಸಲಾಗಿದೆ. ಆದರೆ ಹೆಚ್ಚಿನ ಶಿಕ್ಷಕರಲ್ಲಿ ಮತ್ತು ತರಗತಿಯಲ್ಲಿ ಪುಸ್ತಕಗಳ ಬಗ್ಗೆ ಬಹಳಷ್ಟು ಮಾತುಕತೆ ನಡೆದಿತ್ತು. ಅಲ್ಲದೆ ಓದುವ, ಕಲಿಯುವ ಮತ್ತು ಕಲಿಸುವ ವಿಧಾನಗಳ ಬಗ್ಗೆ ಒಂದು ರೀತಿಯ ಸ್ಥೂಲ ತಿಳಿವಳಿಕೆ ಶಿಕ್ಷಕರನ್ನು ತರಗತಿಗಳ ತನಕ ಕರೆದೊಯ್ಯುವ ಪ್ರಯತ್ನ ಆಗಿತ್ತು. ಆದರೆ ಹಲವು ಕಾರಣಗಳಿಂದ ಇವು ಚರ್ಚೆಗಳಲ್ಲಿ ಮತ್ತು ಪಠ್ಯಪುಸ್ತಕಗಳಲ್ಲಿ ಬಹಳಷ್ಟು ಮಟ್ಟಿಗೆ ಇವುಗಳ ನೋಟ ಕ್ರಮೇಣ ಹೊರಟುಹೋಗಿದೆ. ಇವುಗಳಲ್ಲಿ ಕೆಲವು ಮಗ್ಗುಲುಗಳು ಅದರಲ್ಲೂ ವಿಶೇಷವಾಗಿ ಕಗ್ಗಂಟಾಗಿರುವಂಥವುಗಳಲ್ಲಿ ಒಂದು ಕೋಡ್ ಅವುಗಳನ್ನು ಅರ್ಥಮಾಡಿಕೊಳ್ಳುವ ಮತ್ತು ಓದುವುದರಲ್ಲಿನ ಅಂತರ್ ಸಂಬಂಧಕ್ಕೆ ಸಂಬಂಧಿಸಿದ್ದಾಗಿದೆ. ಪಠ್ಯಪುಸ್ತಕ ಲೇಖಕರ ಗುಂಪು ಮತ್ತು ಶಿಕ್ಷಕರಿಗೆ ಈ ವ್ಯವಹಾರದಲ್ಲಿ ಕೋಡ್ ಅನ್ನು ತಿಳಿದುಕೊಳ್ಳುವುದು ಅಂದರೆ ಡೀಕೋಡಿಂಗ್ ಮಾಡುವುದು ಮತ್ತು ಓದುವುದರ ನಡುವೆ ಇರುವ ಸಂಬಂಧವನ್ನು ತರಗತಿಯ ವ್ಯವಹಾರದಲ್ಲಿ ಹೇಗೆ ತರುವುದು ಎಂಬುದಾಗಿದೆ. ಇದರಲ್ಲಿ ಡೀಕೊಂಡಿಂಗ್ ಓದುವ ಪ್ರಕ್ರಿಯೆಯೆಯಲ್ಲಿ ಯಾವ ಭಾಗಕ್ಕೆ ಸಂಬಂಧಿಸಿದೆ ಎಂಬುದೂ ಸೇರಿದೆ. ಓದಿ ಹೇಳುವ ಮತ್ತು ಓದುವುದರ ನಡುವೆ ಯಾವ ಬಗೆಯ ಸಂಬಂಧವಿದೆ? ನಕಲು ಮಾಡುವುದು ಮತ್ತು ಬರೆಯುವುದರ ನಡುವೆ ಇರುವ ಸಂಬಂಧವೇನು? ಬರೆಯುವ ಮತ್ತು ಓದುವುದರ ಮುಖ್ಯ ಆಧಾರವೇನು? ಯಾವುದಾದರೊಂದು ಸಂಗತಿಯನ್ನು ಓದಿ ಹೇಳುವುದು ಇಲ್ಲವೆ ಓದಿದ್ದನ್ನು ನೆನಪಿಟ್ಟುಕೊಂಡು ಹೇಳುವುದು ಯಾವ ರೀತಿಯಲ್ಲಿ ಸ್ವತಃ ತಾನು ತನ್ನ ವಿಚಾರಗಳನ್ನು ಇಟ್ಟುಕೊಳ್ಳುವುದು ಮತ್ತು ಯಾವುದಾದರೂ ಮಾತುಕತೆಯಲ್ಲಿ ಸೇರಿಕೊಳ್ಳುವುದರಲ್ಲಿ ವ್ಯತ್ಯಾಸವಿದೆ ಮತ್ತು ಮತ್ತು ಪಠ್ಯಕ್ರಮದ ಮೇಲೆ ಈ ವ್ಯತ್ಯಾಸದ ಪರಿಣಾಮವೇನಾಗುತ್ತದೆ? ಇದೇ ರೀತಿ ತನ್ನ ಆಲೋಚನೆ ಮತ್ತು ತರ್ಕದ ಆಧಾರದ ಮೇಲೆ ಮಾತುಕತೆ ನಡೆಸಲು ಮತ್ತು ತನ್ನ ವಿಚಾರಗಳನ್ನೆಲ್ಲ ಒಗ್ಗೂಡಿಸಿ ವ್ಯವಸ್ಥಿತವಾದ ರೀತಿಯಲ್ಲಿ ಮತ್ತು ಬಹಳಷ್ಟು ಸಲ ವಿಸ್ತೃತವಾದ ವಿವರಣೆಯೊಂದಿಗೆ ಪ್ರಸ್ತುತ ಪಡಿಸುವಾಗ ಭಾಷೆಯನ್ನು ಬಳಸುವುದಕ್ಕೂ ಅದನ್ನು ಬೇರೆ ಇನ್ನಾರದೋ ಮೂಲಕ ಹೇಳಲಾದ ಮತ್ತು ಹೆಚ್ಚು ಸುಗಠಿತವಾದ ಉತ್ತರ ತಿಳಿದುಕೊಳ್ಳುವುದಕ್ಕೂ ಖಂಡಿತಾ ವ್ಯತ್ಯಾಸವಿದೆ. ಇದೇ ರೀತಿ ಹೇಳಲಾದ ಪರಿಭಾಷೆಗಳನ್ನು ನೆನಪಿಟ್ಟುಕೊಳ್ಳುವುದಕ್ಕೂ ತಾನೇ ಪರಿಭಾಷೆಗಳನ್ನು ರಚಿಸುವುದಕ್ಕೂ ಮತ್ತು ವಿಚಾರಗಳನ್ನು ತನ್ನ ಮಾತುಗಳಲ್ಲಿ ಪ್ರಸ್ತುತಪಡಿಸುವುದಕ್ಕೂ ಬಹಳ ವ್ಯತ್ಯಾಸವಿದೆ. ಈ ವಿಚಾರಣೀಯ ಸಂಗತಿಗಳು ಮಹತ್ವದವು. ಕಾರಣ ಭಾಷೆಯ ಬೆಳವಣಿಗೆಯ ಅರ್ಥವೇನು ಎಂಬುದನ್ನು ಕುರಿತಂತೆ ಒಂದು ಸ್ಪಷ್ಟವಾದ ತಿಳಿವಳಿಕೆ ಮೂಡಿದಾಗಲೇ ಇದ್ದಂತಿರುವುದರಲ್ಲಿ (=ವಾಸ್ತವದಲ್ಲಿ) ಬದಲಾವಣೆಯ ಸಾಧ್ಯತೆ ಫಲಪ್ರದವಾಗುವುದು.

ಪ್ರಾಥಮಿಕ ತರಗತಿಯ ಹಂತದಲ್ಲಿ ಗಣಿತವನ್ನು ಕಲಿಯುವುದರಲ್ಲಿ, ಪರಿಸರದ ಬಗ್ಗೆ ಕಲಿಯುವುದರಲ್ಲಿ, ಮತ್ತು ಇತರೆ ವಿಷಯಗಳನ್ನು ಕಲಿಯುವುದರಲ್ಲಿ ಭಾಷೆಯು ಮಹತ್ವದ ಪಾತ್ರವನ್ನು ವಹಿಸುತ್ತದೆ. ಭಾಷೆಯು ಈ ವಿಷಯಗಳನ್ನು ಕಲಿಯುವ ಮತ್ತು ಕಲಿಸುವ ಮಾಧ್ಯಮ ಎಂಬ ಕಾರಣಕ್ಕಾಗಿ ಮಾತ್ರ ಇವು ಮಹತ್ವದವಲ್ಲ. ಭಾಷೆಗೂ ಈ ವಿಷಯಗಳಿಗೂ ಇವುಗಳ ಬಗ್ಗೆ ಆಲೋಚಿಸುವುದಕ್ಕೂ ಹೆಚ್ಚಿನ ಸಂಬಂಧವಿದೆ. ಜ್ಞಾನವನ್ನು ಗ್ರಹಿಸುವ ಸಾಮರ್ಥ್ಯ ಮತ್ತು ವಿಚಾರ ಮಾಡುವ ಸಾಮರ್ಥ್ಯವನ್ನು ಭಾಷೆಯು ಪ್ರಭಾವಿತಗೊಳಿಸುತ್ತದೆ. ಅಲ್ಲದೆ ಇಡೀ ಪೂರ್ಣ ದೃಶ್ಯವನ್ನು ನೋಡಿ ಅದನ್ನು ಗ್ರಹಿಸುವ ಸಾಮರ್ಥ್ಯವನ್ನು ನೀಡುತ್ತದೆ. ವ್ಯಾಪಕ ಸಂದರ್ಭಗಳಲ್ಲಿ ಮಾತ್ರವಲ್ಲದೆ ಬೇರೆ ಬೇರೆ ಕಾಲ ಮತ್ತು ಸ್ಥಳಗಳಲ್ಲಿ ಮಾಡಿದ ಅವಲೋಕನಗಳನ್ನು ಒಮ್ಮೆಗೇ ಪ್ರೋಸೆಸ್ ಮಾಡುವ ಸಾಮರ್ಥ್ಯ ನೀಡುತ್ತದೆ. ಇದರ ಆಧಾರದ ಮೇಲೆಯೇ ನಾವು ವಿಚಾರಗಳನ್ನು ರೂಪಿಸುತ್ತೇವೆ ಮತ್ತು ಕಾರ್ಯಗಳನ್ನು ಪ್ರಾರಂಭಿಸುತ್ತೇವೆ.

## ಉನ್ನತ ಪ್ರಾಥಮಿಕ ಹಂತದಲ್ಲಿ ಭಾಷೆಯ ಪರಿಪ್ರೇಕ್ಷ್ಯ

ಒಟ್ಟಾರೆ ಭಾಷೆಯ ವಿಷಯಕ್ಕೆ ಸಂಬಂಧಿಸಿದಂತೆ ಇದುವರೆಗೂ ನಾವು ಏನು ತಿಳಿದಿದ್ದೇವೆ ಅದರಿಂದ ಭಾಷೆಯನ್ನು ಕೇವಲ ಒಂದು ವಿಷಯದ ಹಾಗೆ ನೋಡಿ ಮುಂದುವರಿಯಲು ಸಾಧ್ಯವಾಗುವುದಿಲ್ಲ ಎಂಬುದಂತೂ ಸ್ಪಷ್ಟ. ಭಾಷೆಯು ಒಂದು ಸಾಂಸ್ಕೃತಿಕ ಅನುಭವವನ್ನು ರಚಿಸುವ ವಿಧಾನ ಎಂದು ಕೂಡ ಹೇಳಲಾಗಿದೆ. ಅಲ್ಲದೆ ಇದು ಜನರನ್ನು ಅರ್ಥಮಾಡಿಕೊಳ್ಳುವ, ಜೀವನವನ್ನು ಅರ್ಥಮಾಡಿಕೊಳ್ಳುವ ಮಹತ್ವದ ಭಾಗವಾಗಿದೆ. ಇಷ್ಟಾಗಿಯೂ ತರಗತಿಯ ಒಳಗೆ ಈ ಮಾತಿನ ಬಳಕೆ ಬಹಳ ಸೀಮಿತವಾಗಿ ಅಷ್ಟೇ ಆಗುತ್ತದೆ. ಇದನ್ನು ಹೆಚ್ಚಿಸುವ ಸಾಧ್ಯತೆಯೂ ಇದೆ ಮತ್ತು ಇದರ ಅಗತ್ಯವೂ ಇದೆ. ಉದಾಹರಣೆಗೆ ಸಾಮಾಜಿಕ ಅಧ್ಯಯನದಲ್ಲಿ ನಾವು ಯಾವೆಲ್ಲ ವಿಭಿನ್ನ ಸಮಾಜಗಳ ಬಗ್ಗೆ ಓದುತ್ತಿದ್ದೇವೆಯೋ ಅದನ್ನು ಮಕ್ಕಳ ಜೀವನ, ಅವರ ಭಾಷೆ , ಸಂಸ್ಕೃತಿ ಮತ್ತು ಅವರ ಭಾಷಿಕ ಬೆಳವಣಿಗೆಯೊಂದಿಗೆ ಯಾವ ರೀತಿ ತಳುಕು ಹಾಕುವುದೆಂಬುದನ್ನು ನೋಡಬೇಕಾಗಿದೆ. ಯಾವ ಬಗೆಯ ಅಭ್ಯಾಸಗಳನ್ನು ಕೊಟ್ಟು ನಾವು ಮಕ್ಕಳ ಅಧ್ಯಯನ ಮತ್ತು ವಿಶ್ಲೇಷಣೆಯಲ್ಲಿ ಸುತ್ತುಮುತ್ತಲಿನ ಪರಿಸ್ಥಿತಿಯನ್ನು ಪರಿಕಲ್ಪನೆಗಳೊಂದಿಗೆ ಜೋಡಿಸಬಹುದು. ಉನ್ನತ ಪ್ರಾಥಮಿಕ ಶಾಲೆಗಳಲ್ಲಿ ಯಾವ ಪರಿಕಲ್ಪನೆಗಳನ್ನು ತಿಳಿಸಬೇಕಾಗಿದೆಯೋ ಅವುಗಳೂ ಅವರ ಸುತ್ತುಮುತ್ತಿನ ಪರಿಸರಕ್ಕೆ ಯಾವ ರಿತಿಯಲ್ಲಾದರೂ ತಳುಕುಹಾಕಿಕೊಂಡಿವೆಯೆಂದಾದರೆ ಮತ್ತು ಪರಿಸರದೊಂದಿಗೆ ಅಂತರ ಕ್ರಿಯೆಗಳನ್ನು ನಡೆಸತ್ತ ನಡೆಸುತ್ತ ಅವರು ಅವುಗಳ ಬಗ್ಗೆ ಯೋಚಿಸುವಂತಾದರೆ ಅದು ಅವರ ಕಲಿಕೆಯಲ್ಲಿ ನೆರವಾಗುತ್ತದೆ. ಈ ಅಂತರ ಕ್ರಿಯೆ ಎಷ್ಟು ಆಳವಾಗಿರುತ್ತದೆ ಎಂಬುದು ಈ ಅಂತರ ಕ್ರಿಯೆ ಮತ್ತು ಸಂವಾದದಲ್ಲಿ ಮಕ್ಕಳ ಭಾಷೆಗಳ ಬಳಕೆ ಯಾವ ರೀತಿಯಲ್ಲಿ ಆಗುತ್ತದೆ ಎಂಬುದನ್ನು ಅವಲಂಬಿಸಿರುತ್ತದೆ. ವಿಷಯಗಳ ಪರಿಕಲ್ಪನೆಗಳ ಅನುಭವದಂದಿಗೆ ಜೋಡಿಸುವ ಕೆಲಸ ಆಗುತ್ತದೋ ಇಲ್ಲವೋ ಎಂಬುದರ ಮೇಲೆ ಇದು ಅವಲಂಬಿತವಾಗಿದೆ. ಈ ಹಂತದಲ್ಲಿ ವಸ್ತುಗಳಿಗೆ ಹೆಸರು ಕೊಡುವ ಅಥವಾ ಅವುಗಳ ವಿವರಣೆ ನೀಡುವುದಕ್ಕೆ ಹೋಲಿಸಿದರೆ ಈ ಅಂತರ ಕ್ರಿಯೆ ಗಾಢವಾದ ರೀತಿಯಲ್ಲಿ ಫಲಪ್ರದವಾಗಬಲ್ಲುದು. ಇದನ್ನು ಸರಿಯಾಗಿ ಮಾಡಲು, ತರಗತಿಗಳಲ್ಲಿ ಸುತ್ತುಮುತ್ತ ನಡೆಯುತ್ತಿರುವುದರ ಬಗೆಗಿನ ಟಿಪ್ಪಣಿ, ಶೋಧನೆ ಮತ್ತು ಚರ್ಚೆಗ ಅನುಮತಿ ಇರುವಂಥ ವಿಮರ್ಶೆಗೆ ಅವಕಾಶವಿರಬೇಕಾಗುತ್ತದೆ.

ಉನ್ನತ ಪ್ರಾಥಮಿಕ ತರಗತಿಗಳಲ್ಲಿ ಭಾಷೆಗೆ ಸಂಬಂಧಿಸಿದಂತೆ ಮಾತನಾಡುತ್ತಿರುವಾಗ ಇನ್ನೂ ದೊಡ್ಡ ಪ್ರಶ್ನೆಗಳು ನಮ್ಮ ಮುಂದೆ ಬರುತ್ತವೆ. ಮೊದಲನೆಯ ಪ್ರಶ್ನೆ ಈ ಹಂತದಲ್ಲಿ ಎಷ್ಟು ಭಾಷೆಗಳನ್ನು ಕಲಿಸಬೇಕು, ಯಾವೆಲ್ಲ ಭಾಷೆಗಳನ್ನು ಕಲಿಸಬೇಕು ಮತ್ತು ಈ ಭಾಷೆಗಳ ನಡುವಿನ ಪರಸ್ಪರ ಸಂಬಂಧವೇನಿರಬೇಕು ಎಂಬುದು. ಎರಡನೆಯ ಪ್ರಶ್ನೆಯೆಂದರೆ ನಾವು ಕಲಿಸುತ್ತಿರುವ ಭಾಷೆಯಲ್ಲಿ ಕಲಿಕೆಯ(ಓದಿನ) ಸಾಮಗ್ರಿಗಳನ್ನು ಹೇಗೆ ಸಂಗ್ರಹಿಸುವುದು? ಅದರ ಮಿತಿ ಏನಿರಬೇಕು, ಅದರ ರಚನೆ ಏನಿರಬೇಕು ಮತ್ತು ಅದರಲ್ಲಿನ ಅಭ್ಯಾಸಗಳು ಯಾವ ಪ್ರಕಾರದವಾಗಿರಬೇಕು? ಮತ್ತು ಮೂರನೆಯ ಪ್ರಶ್ನೆಯೆಂದರೆ ಆಲಿಸುವುದು(ಕೇಳಿಸಿಕೊಳ್ಳುವುದು), ಮಾತಾಡುವುದು, ಓದುವುದು, ಬರೆಯುವುದಗಿವನ್ನು ಈ ಹಂತದಲ್ಲಿ ಯಾವ ರೀತಿಯಲ್ಲಿ ಕಾರ್ಯಗತಗೊಳಿಸಬೇಕು ಎಂಬುದು. ಈಗ ಕೇವಲ ಓದುವ ಮತ್ತು ಬರೆಯುವ ಕೆಲಸವಷ್ಟೇ ಆಗುತ್ತದೆಯೆ ಹಾಗೂ ಆಲಿಸುವ(ಕೇಳಿಸಿಕೊಳ್ಳುವ), ಮತ್ತು ಆಡುವ ಕೆಲಸ ಆಗುವುದಿಲ್ಲವೆ ಇಲ್ಲವೆ ತಿಳಿವಳಿಕೆಯ ಮತ್ತು ಅಭಿವ್ಯಕ್ತಿಯ ಭಾಗವಾಗಿ ಅವು ಈ ಹಂತದಲ್ಲಿ ಇದ್ದೇ ಇರುತ್ತವೆಯೆ? ಮತ್ತು ಈ ನಾಲ್ಕೂ ಈ ಹಂತದಲ್ಲೂ ತಿಳಿವಳಿಕೆಯ ಮತ್ತು ಅಭಿವ್ಯಕ್ತಿಯ ಭಾಗವಾಗಿ ಅವು ಇರುತ್ತವೆಂದಾದರೆ ಅದರಲ್ಲಿ ಹೊಸದೇನು ಮತ್ತು ಆಗ ಮಕ್ಕಳು ಅವುಗಳಲ್ಲಿ ತೊಡಗಿಕೊಳ್ಳಲು ಯಾವ ರೀತಿಯ ಅಭ್ಯಾಸಗಳು ಮತ್ತು ಯಾವ ರೀತಿಯ ಅವಕಾಶಗಳನ್ನು ರೂಪಿಸಬೇಕಾಗುತ್ತದೆ.? ಮತ್ತು ಇದೆಲ್ಲವೂ ಭಾಷಾ ತರಗತಿಗಳ ಮಕ್ಕಳ ಜೀವನ ಸಂದರ್ಭದೊಂದಿಗೆ ಸಂಬಂಧ ಜೋಡಿಸಿಕೊಳ್ಳಬೇಕಾದ ರೀತಿಯ ಬೆಳಕಿನಲ್ಲಿ.

**ಭಾಷೆ, ಇತರೆ ವಿಷಯಗಳು ಮತ್ತು ತಾರ್ಕಿಕ ಬೆಳವಣಿಗೆ**

ಉಚ್ಚ ಪ್ರಾಥಮಿಕ ಹಂತದಲ್ಲಿ ಭಾಷಾ ಶಿಕ್ಷಣದ ಇನ್ನೊಂದು ಮಹತ್ವದ ಭಾಗವೆಂದರೆ ಭಾಷೆ ಮತ್ತು ಅನ್ಯ ವಿಷಯಗಳೊಂದಿಗಿನ ಅದರ ಜೋಡಣೆಗೆ ಸಂಬಂಧಿಸಿದ್ದು. ಭಾಷೆಯು ಅನ್ಯ ವಿಷಯಗಳ ಜ್ಞಾನದೊಂದಿಗೆ ಸಂಬಂಧ ಹೊಂದಿರುವ ಕಾರಣದಿಂದಾಗಿಯೇ ಭಾಷೆಯು ಇಡೀ ಪಠ್ಯಚರ್ಯೆ(ಪಠ್ಯಕ್ರಮ)ಯಲ್ಲಿ ಸೇರಿದೆ ಎಂದು ಹೇಳಲಾಗುತ್ತದೆ. ಈ ಜೋಡಣೆಯ ಒಂದು ಭಾಗ ನಾನಾ ಬಗೆಯ ಸಮಸ್ಯೆಗಳು ಮತ್ತು ಪ್ರಶ್ನೆಗಳನ್ನು ಬಿಡಿಸುವುದಾಗಿದೆ. ಪ್ರಾಥಮಿಕ ಶಾಲೆಯಲ್ಲಿನ ಮಕ್ಕಳು ಸಮಸ್ಯೆಗಳನ್ನು ಓದಿ ಅರ್ಥಮಾಡಿಕೊಳ್ಳಲಾರರು ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಪ್ರಾಥಮಿಕ ಶಾಲೆಯಲ್ಲಿ ಮತ್ತು ಉನ್ನತ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಪಾಠವನ್ನು ಅರ್ಥಮಾಡಿಸುವ ಪ್ರಯತ್ನ ಮಾಡುವುದೇ ಪಾಠ ಮಾಡುವ ವಿಧಾನ(ರೀತಿ). ಗಣಿತವಾಗಲಿ, ವಿಜ್ಞಾನವಾಗಲಿ, ಇತರೆ ವಿಷಯವಾಗಿರಲಿ ಪಾಠವನ್ನು

ತಿಳಿಯಪಡಿಸಬೇಕು(=ಅರ್ಥಮಾಡಿಸಬೇಕು) ಮತ್ತು ತಿಳಿಯಪಡಿಸಿದ ಮೇಲೆ ಸಂಬಂಧಿಸಿದ ನೇರ–ಸರಳ ಪ್ರಶ್ನೆಗಳ ಉತ್ತರವನ್ನು ಹುಡುಕಬೇಕು. ಆ ಪ್ರಶೆಗಳಾದರೋ ಎಂಥವೆಂದರೆ ಅವುಗಳ ಉತ್ತರಗಳನ್ನು ಟೆಕ್ಸ್ಟ್ ನಲ್ಲಿ ನೇರವಾಗಿ ಕೊಟ್ಟಿರುತ್ತದೆ ಮತ್ತು ಅವುಗಳ ಪ್ರಶ್ನೆಗಳಲ್ಲೇ ಸಂಕೇತ ಶಬ್ದಗಳಿರುತ್ತವೆ. ಮೇಲೆ ನಾವು ಈಗಾಗಲೇ ಹೇಳಿದಂತೆ ಮಕ್ಕಳಿಗೆ ಪಾಠಗಳನ್ನು ಓದುವ, ಅದನ್ನು ಅರ್ಥಮಾಡಿಕೊಳ್ಳುವ, ಹಾಗೂ ಅದನ್ನು ವಿಶ್ಲೇಷಿಸುವುದನ್ನು ಅಭ್ಯಾಸ ಮಾಡಿಸಬೇಕು. ಹಾಗೆ ಮಾಡುವುದರಿಂದ ಅವನು/ಅವರು ಅವರೇ ಸ್ವತಂತ್ರವಾಗಿ ಓದಿಕೊಳ್ಳಬಲ್ಲವರಾಗಬೇಕೆಂಬುದು ಉದ್ದೇಶ. ಮೊದಲಿಗೆ ಪಠ್ಯಪುಸ್ತಕವನ್ನು ಓದುವುದು, ಮತ್ತು ಆ ವಿಷಯಕ್ಕೆ ಸಂಬಂಧಿಸಿದ ಇತರೆ ಲೇಖನಗಳು, ಪುಸ್ತಕ ಇಲ್ಲವೆ ಪುಸ್ತಕದ ಭಾಗವನ್ನು ಓದುವುದು ಭಾಷಾ ಶಿಕ್ಷಣದ ಮತ್ತು ಆ ವಿಷಯ ಕುರಿತ ಶಿಕ್ಷಣದ ಅನಿವಾರ್ಯ ಅಂಗವಾಗಿದೆ. ಆದ್ದರಿಂದ ವಿಜ್ಞಾನ ಶಿಕ್ಷಣದ, ಸಾಮಾಜಿಕ ಅಧ್ಯಯನ ಶಿಕ್ಷಣದ, ಗಣಿತ ಶಿಕ್ಷಣದ ಉದ್ದೇಶ ಮಕ್ಕಳಿಗೆ ಪರಿಕಲ್ಪನೆಗಳನ್ನು ಕೇವಲ ತಿಳಿಯಪಡಿಸುವುದಾಗಿದೆ ಎಂಬುದನ್ನು ಒಪ್ಪಬೇಕು. ಅವುಗಳನ್ನು ಸರಳಗೊಳಿಸಿ ಕಲಿಯುವವರೆದುರು ಪ್ರಸ್ತುತಪಡಿಸಬೇಕು. ಅದರಿಂದ ಅವರು ಪ್ರಶ್ನೆಗಳನ್ನು ಬಗೆಹರಿಸಲು ಸಮರ್ಥರಾಗುತ್ತಾರೆ. **ಇದು ಈ ವಿಷಯಗಳೊಂದಿಗೆ ಸರಸವಾಡಿದಂತೆ ಅಷ್ಟೇ ಅಲ್ಲ ಭಾಷೆಯ ಬೆಳವಣಿಗೆಯ ಜೊತೆಯಲ್ಲೂ ಸರಸವಾಡಿದಂತೆ.**

ಉನ್ನತ ಪ್ರಾಥಮಿಕ ತರಗತಿಗಳಲ್ಲಿ ಓದಲು(ಕಲಿಯಲು) ಮತ್ತು ತಾನೇ ಓದಿದ ವಿಷಯ ಸಾಮಗ್ರಿಗಳ ಅರ್ಥ ಹೊರತೆಗೆದು ಇತರೆಯವರೊಂದಿಗೆ ಎಲ್ಲದರ ಅರ್ಥ ಕುರಿತಂತೆ ಚರ್ಚಿಸಿ ತನ್ನ ಅರ್ಥವನ್ನೇ ಇನ್ನೂ ಉತ್ತಮವಾಗಿ ವ್ಯಾಖ್ಯಾನಿಸುವ ಅವಕಾಶಗಳು, ವಿಷಯದ ತಿಳಿವಳಿಕೆ ಮತ್ತು ಓದುವ ಸಾಮರ್ಥ್ಯದ ಜೊತೆ ಜೊತೆಯಲ್ಲೇ ತಾರ್ಕಿಕ ಬೆಳವಣಿಗೆಗೆ ಬಹಳ ಪ್ರಯೋಜನಕಾರಿ.

ತರ್ಕವನ್ನು ಅರಿತುಕೊಳ್ಳುವುದು ಮತ್ತು ರೂಪಿಸುವುದೇ ಈ ಹಂತದಲ್ಲಿ ಭಾಷೆಯ ಬೆಳವಣಿಗೆಯ ಎರಡನೇ ಮಹತ್ವದ ಭಾಗ. ವಿಜ್ಞಾನ, ಗಣಿತ, ಇತಿಹಾಸ, ಸಮಾಜಶಾಸ್ತ್ರ, ಅಥವಾ ಇತರೆ ಯಾವುದೇ ವಿಷಯದ ಟೆಕ್ಸ್ಟ್ ಬರೆಯುವಾಗ ಅದರಲ್ಲಿ ಒಂದು ಕ್ರಮಬದ್ಧತೆ ಇರುತ್ತದೆ. ಈ ಕ್ರಮಬದ್ಧತೆಯ ಹಲವು ಮಗ್ಗುಲುಗಳು ಇವೆ. ಇವುಗಳ ಅನುಭವ ಮಾಡಿಕೊಳ್ಳುವ ಅವಶ್ಯಕತೆ ಇದೆ. ಒಂದು ಮಗ್ಗುಲು ಸಂಬಂಧಿಸಿದ ತಾರ್ಕಿಕ ವಿಚಾರಗಳಲ್ಲಿ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ಮುಂದುವರಿಯುವುದು. ಅದಕ್ಕೆ ಪ್ರತಿಯೊಂದು ತರಗತಿಯ ಹಂತದಲ್ಲಿ ಬೇರೆ ಬೇರೆ ರೀತಿಯ ಮತ್ತು ಜಟಿಲತೆಯ ತರ್ಕಗಳ ಕ್ರಮವನ್ನು ಸ್ಥೂಲವಾಗಿ ತಿಳಿದುಕೊಳ್ಳುವುದು, ಅದನ್ನು ತೆರೆದು ಅರ್ಥಮಾಡಿಕೊಳ್ಳುವುದನ್ನು ಕಲಿಯುವುದು ಹಾಗೂ ಅದನ್ನು ಅಭ್ಯಾಸಮಾಡುವ ಆವಶ್ಯಕತೆ ಇದೆ. ಯಾವುದೇ ಪಾಠದ ಕ್ರಮವನ್ನು ತಿಳಿದುಕೊಳ್ಳುವುದು, ಅದನ್ನು ವಿಶ್ಲೇಷಿಸಿ ತಿಳಿದುಕೊಂಡು ತಾನೇ ವ್ಯವಸ್ಥಿತ ರೀತಿಯಲ್ಲಿ ತರ್ಕಬದ್ಧವಾದ ಟೆಕ್ಸ್ಟ್ ಅನ್ನು ಸಿದ್ದಪಡಿಸುವ ಅಭ್ಯಾಸವೂ ಆಗಬೇಕು. ಈ ಬಗೆಯ ಅಭ್ಯಾಸಗಳು ಖುದ್ದು ಓದಿ ಅರ್ಥಮಾಡಿಕೊಂಡು ಕಲಿಯುವ ಪ್ರಕ್ರಿಯೆಯಲ್ಲಿ ನಿರಂತರವಾಗಿ ಆಗುತ್ತಲೇ ಇರುತ್ತವೆ. ಅರ್ಥಮಾಡಿಕೊಳ್ಳುವಲ್ಲಿ ತನ್ನದೇ ಆದ ರೀತಿಯಲ್ಲಿ ತನಗೆ ತಾನೆ ವ್ಯಕ್ತಪಡಿಸುವುದು ನಡೆದೇ ನಡೆಯುತ್ತದಾಗಿ ಇದರ ಮೇಲೆ ವಿಮರ್ಶೆ ಆಗುವುದು, ಕೊಳು–ಕೊಡೆ ನಡೆಯುವುದು ಓದುವ (ಕಲಿಯುವ) ಕ್ರಮವನ್ನು ಚುರುಕುಗೊಳಿಸುತ್ತದೆ. ಇದರಿಂದಲೇ ಓದುವ (ಕಲಿಯುವ) ಸಾಮರ್ಥ್ಯ ಹೆಚ್ಚಾಗುತ್ತ ಹೋಗುತ್ತದೆ. ಆದರೆ ಪಾಠಗಳನ್ನು ಯಾಂತ್ರಿಕವಾದ ರೀತಿಯಲ್ಲಿ ಕಲಿತಿದ್ದರಿಂದಾಗಿ (ಓದಿದ್ದರಿಂದಾಗಿ), ಸ್ವತಃ ತಾನೇ ಓದಿ ತಿಳಿದುಕೊಳ್ಳುವ ಇಚ್ಛೆ ಇಲ್ಲದೆ ಇದ್ದದ್ದರಿಂದಾಗಿ ಇಂಥ ಅಭ್ಯಾಸಗಳು ಆಗುವುದಿಲ್ಲ. ಇದರಿಂದ ತನಗೆ ತಾನೆ ಸುಮ್ಮನೆ ಓದಿಕೊಳ್ಳುವ ಅಭ್ಯಾಸ ಪ್ರಯೋಜನಕರ. ಕಾರಣ ಇದರಲ್ಲಿ ಎಲ್ಲ ರೀತಿಯಲ್ಲೂ ಉತ್ತಮವಾದ ಸಾಮರ್ಥ್ಯವನ್ನು ತಂದುಕೊಡುವಂಥ ಹಲವು ಬಗೆಯ ಓದುವ ಅಭ್ಯಾಸಗಳಿರುವ ಅವಕಾಶಗಳನ್ನು ಒದಗಿಸಿಕೊಡುತ್ತದೆ. ಇದರ ಒಂದು ಉದಾಹರಣೆಯೆಂದರೆ ಬೇರೆ ಬೇರೆ ವಾಕ್ಯಗಳಲ್ಲಿ ಪರಸ್ಪರ ಸಂಬಂಧವನ್ನು ತಿಳಿದುಕೊಂಡು ವ್ಯಕ್ತಪಡಿಸುವುದು. ಇನ್ನೊಂದು ಉದಾಹರಣೆ ಇಡೀ ಪಾಠವನ್ನು ಅರ್ಥಮಾಡಿಕೊಳ್ಳುವಲ್ಲಿ ಯಾವ ಸಂಗತಿ ಮೊದಲು ಬರಬೇಕು, ಯಾವ ಸಂಗತಿ ಅನಂತರ ಬರಬೇಕು ಎಂಬಂಥ ವಿಚಾರಗಳನ್ನು ತಿಳಿದುಕೊಳ್ಳುವುದು. ಒಟ್ಟಾರೆ ಇದು ಯಾವುದೇ ಟೆಕ್ಸ್ಟ್‌ನ ಆಳವಾದ ಅಧ್ಯಯನ. ಅದರಲ್ಲಿ ಅದರ ರಚನೆಯನ್ನೂ ಓದುಗನು ತಿಳಿದುಕೊಳ್ಳಬೇಕು; ಭಾಷಿಕ ಸಾಮರ್ಥ್ಯದ ಬೆಳವಣಿಗೆಯ ಮತ್ತು ಅದನ್ನು ಬಳಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದರ ಭಾಗ. ಈ

ಸಾಮರ್ಥ್ಯದ ಬೆಳವಣಿಗೆಯ ಪ್ರಯತ್ನದ ಮಾಧ್ಯಮವೆಂದರೆ ಬಾಲಕನು ತಾನೇ ಟೆಕ್ಸ್ಟ್ ಅನ್ನು ಓದುವುದು ಮತ್ತು ಇತರೆ ಮಕ್ಕಳ ಜೊತೆ ಗುಂಪಿನಲ್ಲಿ(ಸಮೂಹ) ಅದನ್ನು ಓದುವುದು. ಇಂಥ ಪರಿಸ್ಥಿತಿಗಳಲ್ಲೇ ಈ ಪಾಠ ಏನು ಹೇಳುತ್ತಿದೆ ಇಲ್ಲವೆ ಇದರ ಈ ಭಾಗ ಏಕೆ ಅರ್ಥವಾಗುತ್ತಿಲ್ಲ ಎಂಬುದನ್ನು ಯೋಚಿಸುವ ಅವಕಾಶ ಅವನಿಗೆ ಸಿಗುತ್ತದೆ. ಯಾವ

ವಾಕ್ಯ ಮೊದಲು ಬರಬೇಕು, ಯಾವ ವಾಕ್ಯ ಆಮೇಲೆ ಬರಬೇಕು ಮತ್ತು ಏಕೆ ಎಂಬುದು ಅವನಿಗೆ ಗೊತ್ತಾಗುತ್ತ ಹೋಗುತ್ತದೆ. ತರ್ಕದ ನಡೆ ಏನು ಮತ್ತು ಅದನ್ನು ಹೇಗೆ ಸರಿಯಗಿ ಪ್ರಸ್ತುತಪಡಿಸಬಹುದು? ಯಾವ ಬಗೆಯ ತರ್ಕಗಳು ಆಧಾರಭೂತವಾದವು ಮತ್ತು ಅರ್ಥಪೂರ್ಣವಾದವು ಮತ್ತು ತರ್ಕದ ರೂಪದಲ್ಲಿ ಪ್ರಸ್ತುತಪಡಿಸಲು ಉಚಿತವಲ್ಲದ, ಆಧಾರ ರಹಿತವಾದ ಅಭಿಪ್ರಾಯಗಳು (ಸಿದ್ಧಾಂತಗಳು) ಯಾವುವು ಎಂಬುದು ಗೊತ್ತಾಗುತ್ತದೆ. ತರಗತಿಯಲ್ಲಿ ಪ್ರತಿಯೊಂದು ವಿಷಯದ ಟೆಕ್ಸ್ಟ್ ಮತ್ತು ಪ್ರಕ್ರಿಯೆಗಳು ವಿಷಯ ಮತ್ತು ಅದಕ್ಕೆ ಬಳಕೆಯಾದ ಭಾಷೆಯ ಅನುಭವವು ಕಲಿಯುವವನಿಗೆ ಆಗುವಂತಿರಬೇಕು. ಅವನು ಪ್ರತಿಯೊಂದು ವಿಷಯದ ಟೆಕ್ಸ್ಟ್ ಅನ್ನು ಓದಿ ಏನು ಅರ್ಥವಾಯಿತು ಎಂಬುದನ್ನು ಬರೆಯುವುದು ಮತ್ತು ತಾನೇ ಬರೆದ ಟೆಕ್ಸ್ಟ್ ಅನ್ನು ಜೊತೆಗಾರರೊಂದಿಗೆ ಸೇರಿಕೊಂಡು ವಿಶ್ಲೇಷಿಸುವುದು ಈ ಇಡೀ ಕಾರ್ಯದಲ್ಲಿ ನೆರವಾಗುತ್ತದೆ. ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಬಳಸುವಾಗ ಅದರ ಭಾಷಾ ಶೈಲಿ, ಶಬ್ದಸಂಪತ್ತು ಮತ್ತು ತಾರ್ಕಿಕ ರಚನೆಯನ್ನು ಪರಿಚಯಮಾಡಿಕೊಳ್ಳಬೇಕು ಮತ್ತು ಆ ಪುಸ್ತಕದಲ್ಲಿರುವ ವಿಷಯ ಸಾಮಗ್ರಿಯ ಸಮರ್ಥ ಓದುಗನನ್ನಾಗಿ ಅದು ಮಾಡಿಬಿಡುವ ಮಟ್ಟಿಗೆ ಆ ಪಠ್ಯಪುಸ್ತಕದೊಂದಿಗೆ ಅವರ ಅನುಸಂಧಾನ (=ಪ್ರಕ್ರಿಯೆ) ನಡೆಯಬೇಕು.

ನಾವು ಮೇಲೆ ಹೇಳಿರುವ ಹಾಗೆ ಪಾಠವನ್ನು ಅರ್ಥಮಾಡಿಕೊಂಡು ಓದುತ್ತಿರುವಾಗ ಅದರ ತಾರ್ಕಿಕ ಕ್ರಮವೇನು ಮತ್ತು ಆ ತಾರ್ಕಿಕ ಕ್ರಮದ ರಚನೆ ಹೇಗೆ ಆಗಿದೆ ಎಂಬುದನ್ನು ಕಂಡುಕೊಳ್ಳಬೇಕು. ಅದನ್ನು ಯಾವ ರೀತಿಯಲ್ಲಿ ಉತ್ತಮಪಡಿಸಬಹುದು ಇಲ್ಲವೆ ನಾವು ಅದಕ್ಕೇನನ್ನಾದರೂ ಜೋಡಿಸಬಹುದೆ ಎಂಬುದರ ಬಗ್ಗೆ ಒಂದಷ್ಟು ಪ್ರಯತ್ನಿಸಬಹುದು. ಯಾರಾದರೂ ವ್ಯಕ್ತಿ ಯಾವುದಾದರೊಂದು ಟೆಕ್ಸ್ಟ್ ಅನ್ನು ಓದಿದಾಗ ಅದರ ಬಗ್ಗೆ ತನ್ನದೇ ಆದ ದೃಷ್ಟಿಯನ್ನು ತಳೆಯಬೇಕಾಗುತ್ತದೆ. ಟೆಕ್ಸ್ಟ್ ಅನ್ನು ಅವನು ಯಾವ ದೃಷ್ಟಿಯಿಂದ ಅರ್ಥಮಾಡಿಕೊಳ್ಳುತ್ತಾನೋ ಇನ್ನೊಬ್ಬ ವ್ಯಕ್ತಿ ಅದೇ ದೃಷ್ಟಿಯಿಂದ ಅರ್ಥಮಾಡಿಕೊಳ್ಳುವುದಿಲ್ಲ. ಈ ಎರಡೂ ದೃಷ್ಟಿಗಳಲ್ಲಿ ಏನು ವ್ಯತ್ಯಾಸವಿದೆ ಅದು ಓದುಗ ಮತ್ತು ಟೆಕ್ಸ್ಟ್ ನ ನಡುವಿನ ಸಂಬಂಧವಾಗಿದೆ. ಆದ್ದರಿಂದ ತರಗತಿಯಲ್ಲಿ ಟೆಕ್ಸ್ಟ್ ಕುರಿತಂತೆ ನಡೆಯುವ ಪರಸ್ಪರ ವಿಮರ್ಶೆ ಅವುಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ನೆರವಾಗುವುದಷ್ಟೇ ಅಲ್ಲ, ಬದಲಿಗೆ ವಿಭಿನ್ನ ದೃಷ್ಟಿಕೋಣಗಳನ್ನು ಅರ್ಥಮಾಡಿಕೊಳ್ಳುವಲ್ಲಿಯೂ ನೆರವಾಗುತ್ತದೆ. ಕಲಿಯುವವರು ಅರ್ಥಪೂರ್ಣವಾದ ಪ್ರಶ್ನೆ ಇಲ್ಲವೆ ಸಮಸ್ಯೆಯೊಂದಿಗೆ ಸೆಣಸಿದಾಗಷ್ಟೇ ಇದೆಲ್ಲವೂ ಸಾಧ್ಯ. ಈ ಪ್ರಯತ್ನ ಸಾಮೂಹಿಕವಾದಾಗ ಕಲಿಯುವ ಪ್ರಕ್ರಿಯೆಗೆ ಅದು ಹೆಚ್ಚು ನೆರವಾಗುತ್ತದೆ. ಪ್ರತಿಯೊಂದು ವಿಷಯದಲ್ಲೂ ಪಾಠವನ್ನು ಅರ್ಥಮಾಡಿಕೊಳ್ಳುವ ರೀತಿ ಮತ್ತು ಹಾದಿಗಳು ಬೇರೆಬೇರೆಯಾಗಿದ್ದಾಗ್ಯೂ ಮತ್ತು ಅವುಗಳ ಮಗ್ಗುಲುಗಳು ಬೇರೆ ಬೇರೆಯಾಗಿದ್ದಾಗ್ಯೂ ಇವುಗಳಲ್ಲಿ ಬಹಳಷ್ಟು ಸಂಗತಿಗಳು ಸಮಾನವಾಗಿರುತ್ತವೆ. ಉದಾಹರಣೆಗೆ ಗಣಿತಕ್ಕೆ ಸಂಬಂಧಿಸಿದ ಪ್ರಶ್ನೆಗಳ ರಚನೆ ಅಥವಾ ಗಣಿತಕ್ಕೆ ಸಂಬಂಧಿಸಿದ ಒಡಪುಗಳ( ಕಗ್ಗಂಟುಗಳ) ರಚನೆ ವಿಜ್ಞಾನದಲ್ಲಿ ಕೊಟ್ಟಿರುವ ಸಮಸ್ಯೆಗಳಿಗಿಂತಲೂ ವಿಭಿನ್ನವಾಗಿರುತ್ತವೆ. ಆದರೆ ಇವೆರಡಕ್ಕೂ ಕೆಲವು ಸಂಗತಿಗಳು ಸಮಾನವಾಗಿರುತ್ತವೆ. ಆದರೂ ಗಣಿತದಲ್ಲಿ ನೀಡಲಾಗುವ ಪಠ್ಯಗಳು ಅವು ಸಾಮಾನ್ಯವಾಗಿ ಸಂಕ್ಷಿಪ್ತ ಭಾಷೆಯನ್ನು ಬಳಸುತ್ತವೆ. ಅವನ್ನು ಕಲಿಯುವವರು(ಓದುವವರು) ಇಡೀ ಟೆಕ್ಸ್ಟ್ ಅನ್ನು ಗಮನವಿಟ್ಟು ಅಭ್ಯಾಸ ಮಾಡಬೇಕಾಗುತ್ತದೆ (=ಓದಬೇಕಾಗುತ್ತದೆ). ಅದು ಏಕೆಂದರೆ ಅದರಲ್ಲಿ ಕಾಪು ತಡೆಗಳಾಗಲಿ, ಪೂರಣ ಪಾಠಗಳಾಗಲಿ, ವಿಚಾರಗಳ ಪುನರಾವರ್ತನೆಯಾಗಲಿ ಇರುವುದಿಲ್ಲ. ವಿಶಿಷ್ಟ ತಾಂತ್ರಿಕ ಶಬ್ದಗಳು ಕೂಡ ಇರುವ ಬಿಗಿಯಾದ ನಿಷ್ಕೃಷ್ಟವಾದ(ಕರಾರುವಾಕ್ಕಾದ) ಭಾಷೆ ಅದರದು. ಬಹಳಷ್ಟು ಹೆಚ್ಚಿನ ಸಾಮಗ್ರಿಯನ್ನು ಓದುವ ಅಗತ್ಯವಿರುವ ಹಲವು ಪ್ರಶ್ನೆಗಳು ಗಣಿತದಲ್ಲಿ ಇರುತ್ತದೆ. ಆದರೆ ಇದು ಪ್ರಾಯಶಃ ಇರುವುದಿಲ್ಲ. ಇದರ ಜೊತೆಜೊತೆಯಲ್ಲೇ ಕೆಲವು ತುಂಬ ದೊಡ್ಡವಂತೂ ಅಲ್ಲದ, ಆದರೆ ಗಮನವಿಟ್ಟು ಓದಬೇಕಾದ ಮತ್ತು ಹೆಚ್ಚು ಗಾಢವಾಗಿ ತಿಳಿದುಕೊಳ್ಳುವ ಸಾಮರ್ಥ್ಯದ ಅವಶ್ಯಕತೆ ಇರುವಂಥವೂ ಇರುತ್ತವೆ. ಪ್ರಶ್ನೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಪ್ರಮುಖ ಹೆಜ್ಜೆಯೆಂದರೆ– ಪ್ರಶ್ನೆಯಲ್ಲಿ ಏನನ್ನು ಕೇಳಲಾಗಿದೆ, ಪ್ರಶ್ನೆಯ ಬರಹದಲ್ಲಿ ಮಹತ್ವದ ಸಂಗತಿಗಳು ಯಾವುವು, ಕೇಳಲಾದ ಪ್ರಶ್ನೆಯ ಅರ್ಥಪೂರ್ಣವಾದ ಉತ್ತರ ಸಿದ್ಧಪಡಿಸಲು ಏನು ಮಾಡಬೇಕಾಗಿದೆ ಎಂಬುದು.

ಗಣಿತದ ಸಮಸ್ಯೆಯನ್ನು ಬಗೆಹರಿಸಲು ಪ್ರಶ್ನೆಯನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯನ್ನು ಭಾಗಗಳಾಗಿ ವಿಭಾಗಿಸಿ ತಿಳಿಯಪಡಿಸಬಹುದಾಗಿದೆ. ಇದಕ್ಕೆ ಒಂದು ಉದಾಹರಣೆಯೆಂದರೆ IGNOU ನ ಸಿ. ಟಿ. ಪಿ. ಎಮ್. ಕೋರ್ಸ್‌ನಲ್ಲಿ ಉದಾಹರಣೆಯ ರೂಪದಲ್ಲಿ ಉದ್ಧರಿಸಿಕೊಡಲಾಗಿದೆ. ಇಂಥ ಇನ್ನು ಹಲವು ಉದಾಹರಣೆಗಳಿವೆ. ಇವೆಲ್ಲವುಗಳಲ್ಲಿ ಪ್ರಶ್ನೆಯನ್ನು ಓದಿ ತಿಳಿದುಕೊಂಡು ಅನಂತರ ಬಗೆಹರಿಸುವ ಪ್ರಕ್ರಿಯೆ ಶುರುವಾಗುತ್ತದೆ ಎಂಬುದು ಎಲ್ಲಕ್ಕಿಂತ ಮುಖ್ಯವಾದ ಸಂಗತಿ ಎಂದು ಅಂಗೀಕರಿಸಲಾಗಿದೆ. ಶಬ್ದಗಳ ಸಮಸ್ಯೆಗಳಲ್ಲಿ(ಬರಹದ ಶೈಲಿ) ಬರುವ ತೊಡಕುಗಳ ಬಗ್ಗೆಯೂ ಬಹಳಷ್ಟು

ವಿಚಾರಮಾಡಲಾಗಿದೆ. ಅವುಗಳಲ್ಲಿ ತರ್ಕದ ರೂಪಗಳು, ಮತ್ತು ಅದರಿಂದ ಮಕ್ಕಳ ಸಂಘರ್ಷದ ರೂಪಗಳು ಮತ್ತು ಪ್ರಮಾಣದ ಬಗ್ಗೆಯೂ ವಿಚಾರಮಾಡಲಾಗಿದೆ. ವಿಜ್ಞಾನ ಮತ್ತು ಸಾಮಾಜಿಕ ಅಧ್ಯಯನದಲ್ಲಿ ಕೂಡ ಅನೇಕ ಬಗೆಯ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳುವ ಅವಶ್ಯಕತೆಯದು ನಡೆಯುತ್ತಿರುವಾಗ ಅದರಿಂದ ಭಾಷಿಕ ಸಾಮರ್ಥ್ಯಗಳ ಬೆಳವಣಿಗೆಯ ಸಾಧ್ಯತೆ ಇನ್ನಷ್ಟು ಅಪೇಕ್ಷಣೀಯವಾಗಿದೆ. ಈ ವಿಷಯಗಳಲ್ಲಿ ಶಬ್ದಗಳ ಹೊರತಾಗಿ ರೇಖಾಚಿತ್ರಗಳು, ಫ್ಲೋಚಾರ್ಟ್, ಪಟ್ಟಿಗಳು(ಸೂಚಿಗಳು), ಮತ್ತು ಇನ್ನಿತರೆ ರೂಪಗಳಲ್ಲಿ ಸಂಗತಿಯನ್ನು ಹೇಳಲಾಗುತ್ತದೆ. ಅದನ್ನು ಓದುವುದು, ಬರೆಯುವುದು ಮತ್ತು ಆ ರೂಪದಲ್ಲಿ ತಮ್ಮ ವಿಚಾರಗಳನ್ನು ಮುಂದಿಡುವುದು ಕೂಡ ತಿಳಿವೆಂಬ ಬತ್ತಳಿಕೆಯಲ್ಲಿನ ಮಹತ್ವದ ಬಾಣ.

**ತಿಳಿದುಕೊಳ್ಳುವುದು(=ಅರ್ಥಮಾಡಿಕೊಳ್ಳುವುದು) ಮತ್ತು ಕಥನದ ಪರೀಕ್ಷೆ:**

ತಾನೇ ಓದಿ ಅರ್ಥಮಾಡಿಕೊಳ್ಳುವುದು ಸೇರಿರುವ ತಿಳಿದುಕೊಳ್ಳುವ (ಅರ್ಥಮಾಡಿಕೊಳ್ಳುವ) ಪ್ರಕ್ರಿಯೆಗೆ ಓದಲಾದ ವಿಚಾರಗಳ ವಿಶ್ಲೇಷಣೆ ಮತ್ತು ಸಂಗಹಣೆಯ ಅಗತ್ಯದ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ವಿಷಯದ ತಿಳಿವಳಿಕೆ ಮತ್ತು ಓದಿ ತಿಳಿದುಕೊಳ್ಳುವ ಸಾಮರ್ಥ್ಯದ ಬೆಳವಣಿಗೆಗೆ, ಎಲ್ಲ ವಿಷಯಗಳಲ್ಲೂ ಉನ್ನತ ಪ್ರಾಥಮಿಕ ಹಂತದಲ್ಲಿ ಕಥನಗಳನ್ನು ಪರೀಕ್ಷೆ ಮಾಡಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು. ಗಣಿತ, ವಿಜ್ಞಾನ, ಸಾಮಾಜಿಕ ಅಧ್ಯಯನ ಅಷ್ಟೇ ಏಕೆ ಭಾಷೆಯ ಸಂದರ್ಭದಲ್ಲಿ ಸಹ ಓದುಗನಿಗೆ ನೀಡಲಾದ ಮತ್ತು ತಿಳಿಯಪಡಿಸಲಾದ ಪರಿಕಲ್ಪನೆಗಳನ್ನು ಬಳಕೆ ಮಾಡುವ ಅವಕಾಶಗಳನ್ನು ಒದಗಿಸುವಂಥ ಸಮಸ್ಯೆಗಳನ್ನು ಸಿದ್ಧಪಡಿಸಿಕೊಡುವ ಅಗತ್ಯವಿದೆ. ತಥ್ಯದ ಇಲ್ಲವೆ ತರ್ಕದ ಪರೀಕ್ಷೆಯ ಅಗತ್ಯವಿರುವ, ಇಲ್ಲವೆ ಸಮಸ್ಯೆಗಳನ್ನು ಬಿಡಿಸುವ ಪ್ರಕ್ರಿಯೆಯನ್ನು ಎಲ್ಲಿಂದ ಮತ್ತು ಹೇಗೆ ಪ್ರಾರಂಭಿಸಬೇಕು ಮತ್ತು ಅವುಗಳಲ್ಲಿ ಯಾವೆಲ್ಲ ಪ್ರಮುಖ ಮಗ್ಗುಲುಗಳು ಸೇರಿವೆ ಎಂಬಂಥ ಪ್ರಶ್ನೆಗಳು ಇರುವಂಥ ಕಥನಗಳಾಗಿರಬೇಕು. ಈ ಬಗೆಯ ಕೆಲಸಗಳನ್ನು ಹೆಚ್ಚು ಹೆಚ್ಚಾಗಿ ಮಾಡುತ್ತ ಮಾಡುತ್ತ ಬಾಲಕನು ಕ್ರಮೇಣ ತನಗೆ ತಾನೇ ಪ್ರಶ್ನೆಗಳಿಗೆ ಒಂದು ಪರಿಹಾರ ಯೋಜನೆಯನ್ನು ಸಿದ್ಧಪಡಿಸಿ ಅವುಗಳೊಂದಿಗೆ ಸೆಣಸುವ ಗಂಭೀರ ಪ್ರಯತ್ನ ಮಾಡವುದರಲ್ಲಿ ಸಮರ್ಥನಾಗುವುದನ್ನು ಕಂಡುಕೊಳ್ಳತ್ತಾನೆ. ಇದರೊಂದಿಗ ಪ್ರಶ್ನೆಯಲ್ಲಿ ಬಳಕೆ ಮಾಡುವ ಪರಿಕಲ್ಪನೆಗಳ ಬೆಳವಣಿಗೆಯೂ ಆಗುತ್ತದೆ. ಭಾಷೆಯ ಪಠ್ಯಕ್ರಮವನ್ನು ಸಿದ್ಧಪಡಿಸುವುದು ಮತ್ತು ಇತರೆ ವಿಷಯಗಳ ಪಠ್ಯಕ್ರಮವನ್ನು ಸಿದ್ಧ'ಪಡಿಸುವುದನ್ನು ಈ ಎರಡರಲ್ಲೂ ನೀಡಲಾಗಿರುವ ಸಾಮಗ್ರಿಗಳನ್ನು ಜೊತೆ ಜೊತೆಗೆ ಇಟ್ಟುಕೊಂಡೇ ಮಾಡಬೇಕು. ತರಗತಿಗಳಲ್ಲಿ ಭಾಷೆ ಮತ್ತು ಉಳಿದ ವಿಷಯಗಳ ನಡುವೆ ಯಾವುದೇ ಸಂಬಂಧ ಮತ್ತು ಅಂತರ್ ಕ್ರಿಯೆ ಇರಕೂಡದು. ಈ ಹಂತದಲ್ಲಿ ಭಾಷೆ ಮತ್ತು ಇತರೆ ವಿಷಯಗಳ ನಡುವಿನ ಪರಿಕಲ್ಪನೆಗಳ ಬೆಳವಣಿಗೆ ಒಂದು ಬಹುದೊಡ್ಡ ಕೊರತೆಯನ್ನು ಉಳಿಸುತ್ತದೆ.

**ಸಮಸ್ಯೆಯನ್ನು ಬಗೆಹರಿಸುವುದು**

ಕಲಿಯುವ ಮತ್ತು ಕಲಿತಿರುವ ಜ್ಞಾನವನ್ನು ಸುದೃಢಗೊಳಿಸುವ ಹಾದಿಯೆಂದರೆ ಸಮಸ್ಯೆಯನ್ನು ಬಗೆ ಹರಿಸುವ ಇಲ್ಲವೆ ಪ್ರಶ್ನೆಯನ್ನು ಬಗೆಹರಿಸುವುದೇ ಆಗಿದೆ. ಪ್ರಶ್ನೆಗಳನ್ನು ಚೆನ್ನಾಗಿ ಸಿದ್ಧಪಡಿಸಿದ್ದೇ ಆದರೆ ಅದು ಪರಿಕಲ್ಪನೆಗಳ ಅಭ್ಯಾಸಕ್ಕೆ ಅನೇಕ ರೀತಿಯ ಅವಕಾಶಗಳನ್ನು ಒದಗಿಸಬಲ್ಲುದು. ಸಮಸ್ಯೆ ಇಲ್ಲವೆ ಪ್ರಶ್ನೆಯ ಟೆಕ್ಸ್ಟ್ ಅನ್ನು ಓದಿ ತಿಳಿದುಕೊಳ್ಳುವುದು ಅಭ್ಯಾಸಮಾಡುವ ಮೊದಲ ಹೆಜ್ಜೆ. ಒಂದು ವಿಷಯಕ್ಕೆ ಸ್ವಾಭಾವಿಕವಾದಂಥ, ಆ ಕಾರಣದಿಂದಾಗಿ ಓದಿ ಅರ್ಥೈಸಿಕೊಳ್ಳುವುದು ಅಗತ್ಯವಾದಂಥ ರೀತಿಯ ಶಬ್ದಗಳು ಮತ್ತು ವಾಕ್ಯಗಳನ್ನು ಬಳಸಿಕೊಂಡು ಮಾಡಿರುವಂಥ ಟೆಕ್ಸ್ಟ್ ಇದಾಗಿರುತ್ತದೆ. ತಿಳಿದುಕೊಳ್ಳುವುದೆಂಬುದರ ಅರ್ಥ, ಪ್ರಶ್ನೆಯ ರಚನೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರಲ್ಲಿ ಹೇಳಿರುವಂಥ ಸಂಗತಿಗಳನ್ನು ಬೇರೆ ಬೇರೆ(ಪೃಥಕ್ಕರಿಸುವುದು) ಮಾಡುವುದಾಗಿದೆ. ಸಮಸ್ಯೆಯನ್ನು ಬಗೆಹರಿಸುವ ಮೊದಲ ಹೆಜ್ಜೆ ಇದೇ ಆಗಿದೆ. ಇದಕ್ಕೆ ಬೇಕಾಗಿರುವುದು ಬಾಲಕನು ಪಠ್ಯವನ್ನು ಸರಿಯಾಗಿ ಓದುವುದು. ಅದು ಅಭ್ಯಾಸವಿಲ್ಲದೆ ಸಾಧ್ಯವಾಗುವುದಿಲ್ಲ. ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದು , ಪರಿಭಾಷೆಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ತನ್ನ ಪುಸ್ತಕದ ಪರಿಭಾಷೆಗಳನ್ನು ಅಥವಾ ಪರಿಕಲ್ಪನೆಗಳನ್ನು ವಿವರವಾಗಿ ವ್ಯಾಖ್ಯಾನಿಸುವುದಕ್ಕೂ ಈ ಮಾತು ಅನ್ವಯಿಸುತ್ತದೆ. ಇದರ ಜೊತೆ ಜೊತೆಯಲ್ಲೇ ಇವಕ್ಕೆ ಇನ್ನಿತರೆ ಉದಾಹರಣೆಗಳನ್ನು ಯೋಚಿಸುವುದು, ಮತ್ತು ಇನ್ನಷ್ಟು ಪ್ರಶ್ನೆಗಳನ್ನು ಯೋಚಿಸುವುದು ಮತ್ತು ಅವುಗಳನ್ನು ಅಭ್ಯಾಸಮಾಡುವುದು ಬಹಳ ಮಹತ್ವದ್ದು. ಇದರ ನೇರವಾಧ ಅರ್ಥವೆಂದರೆ ಭಾಷೆಯನ್ನು ಕಲಿಯುವ ಅಭ್ಯಾಸವನ್ನು ಇಡೀ ಪಠ್ಯಕ್ರಮದಲ್ಲಿ ತೋರಿಸಬೇಕು ಎನ್ನುವುದು. ಆದರೆ ಹಿಂದೀ ಭಾಷೆಗೆ ಸಂಬಂಧಿಸಿದ ಪಠ್ಯಚರ್ಯೆ ಮತ್ತು ಪಠ್ಯಕ್ರಮ ಅಥವಾ ಪಠ್ಯ ಪುಸ್ತಕ ಈ ವಿಷಯದ ಬಗ್ಗೆ ಯಾವುದೇ ವ್ಯವಸ್ಥಿತವಾದ ಕೆಲಸ ಮಾಡಿಸುವುದಿಲ್ಲ.

ಪ್ರಶ್ನೆಗಳನ್ನು ಸ್ವತಂತ್ರವಾಗಿ ಬಿಡಿಸುವುದನ್ನು(ಬಗೆಹರಿಸು) ಕಲಿಯುವ ಹಾದಿಯಲ್ಲಿ ಓದಿ ಪ್ರಶ್ನೆಗಳನ್ನು ಬಿಡಿಸುವ ಹಂತ ಹಂತದ ಅವಕಾಶಗಳು ದೊರೆಯುವುದು ಅಗತ್ಯ. ಈ ಪ್ರಯತ್ನಗಳಿಂದ ಸಮಸ್ಯೆಯ ರೂಪದಲ್ಲಿ ಕೊಡಲಾಗುತ್ತಿರುವ ಟೆಕ್ಸ್ಟ್‌ನಲ್ಲಿ ಮೂಲವಾಗಿ ಯಾವ ವಿಷಯವನ್ನು ಹೇಳಲಾಗುತ್ತಿದೆ ಎಂಬುದು ಎಂಬುದರ ಹೊಲಬು ಅವನಿಗೆ ಆಗಬೇಕು. ಇದರ ನಂತರ ಅದರಲ್ಲಿ ಯಾವ ಬಗೆಯ ತಿಳಿವನ್ನು ನೀಡಿದೆ ಎಂಬುದನ್ನು ತಿಳಿದುಕೊಳ್ಳಬೇಕು ಮತ್ತು ವಾಸ್ತವವಾಗಿ ಏನನ್ನು ಕೇಳಲಾಗುತ್ತಿದೆ ಎಂಬುದನ್ನು ತಿಳಿಯಬೇಕು. ಸಮಸ್ಯೆಯ ಪರಿಹಾರವನ್ನು ತಲುಪಬೇಕೆಂದರೆ ನೀಡಲಾಗಿರುವ ತಿಳಿವು ಮತ್ತು ಕೇಳಲಾಗುತ್ತಿರುವುದು ಇವುಗಳ ನಡುವಿನ ಸಂಬಂಧವನ್ನು ತಿಳಿದುಕೊಳ್ಳಬೇಕು. ಯಾವ ಬಗೆಯ ತಿಳಿವು ಅನಿವಾರ್ಯವಲ್ಲ ಎಂಬುದನ್ನು ತಿಳಿದುಕೊಂಡು ಅದನ್ನು ತೆಗೆದುಹಾಕಬೇಕು. ಏನನ್ನು ಕೇಳಲಾಗುತ್ತಿದೆ ಎಂಬುದರ ಸಮೀಪಕ್ಕೆ ತಲುಪಲು ಏನನ್ನು ನೀಡಲಾಗಿದೆ ಅದರಲ್ಲಿ ಯಾವ ಭಾಗವನ್ನು ಯಾವಾಗ ಮತ್ತು ಹೇಗೆ ಉಪಯೋಗಮಾಡಿಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳುವುದು ಅವಶ್ಯಕ. ಇದಕ್ಕಾಗಿ ಅಗತ್ಯವಿರುವಷ್ಟು ಮಾತುಗಳನ್ನು ಸ್ಪಷ್ಟವಾಗಿಬರೆಯುವುದು ಮತ್ತು ಯಾವ ವಿಷಯ ಅಥವಾ ಸಂಗತಿ ಕೇವಲ ಹೆಚ್ಚು ವಿವರವನ್ನು ನೀಡುತ್ತಿದೆ ಇಲ್ಲವೆ ತೊಡಕಾಗುತ್ತಿದೆ ಎಂಬುದನ್ನು ಗುರುತಿಸವುದು ಅಗತ್ಯ. ಇದರಿಂದ ಈಗ ಅಧ್ಯಯನಕ್ಕೆ ಅಗತ್ಯವಿರುವ ಸಾಮರ್ಥ್ಯ ಅಥವಾ ವಿಷಯದ ತಿಳಿವಳಿಕೆ ಆಗುತ್ತಿದೆಯೆ ಎಂಬುದರ ಅರಿವಾಗುತ್ತದೆ. ಈ ರೀತಿಯಲ್ಲಿ ಅಭ್ಯಾಸ ಮಾಡುವುದು ಮತ್ತು ಹೀಗೆ ಅಭ್ಯಾಸಮಾಡಲು ಧೈರ್ಯ ವಹಿಸಿ ಹಲವು ಬಾರಿ ಓದುವುದು ಭಾಷೆ ಮತ್ತು ಇತರೆ ಎಲ್ಲ ವಿಷಯಗಳ ತರಗತಿಯಲ್ಲಿ ಅತಿ ಅಗತ್ಯ. ಸಾಮಾನ್ಯವಾಗಿ ನಾವು ಈ ಸಂಗತಿಯನ್ನು ಭಾಷಾ ತರಗತಿಯಲ್ಲಿ ಕೂಡ ಅಲಕ್ಷಿಸುತ್ತೇವೆ ಮತ್ತು ಇತರೆ ವಿಷಯಗಳ ತರಗತಿಯಲ್ಲಿಯೂ ಇವುಗಳ ಬಗ್ಗೆ ಯೋಚಿಸುವುದೇ ಇಲ್ಲ ಮತ್ತು ಹೀಗೆ ಈ ಎರಡೂ ಕಡೆಗಳಲ್ಲಿ ಅಲಕ್ಷ್ಯಕ್ಕೊಳಗಾಗುತ್ತದೆ.

**ಅರ್ಥಮಾಡಿಕೊಂಡು ಓದುವುದು ಎಲ್ಲಿ ಆಗಬೇಕು?**

ಇನ್ನೊಂದು ಮಹತ್ವದ ಸಂಗತಿ ಇದೆ. ಅದೆಂದರೆ ಸಾಮಾನ್ಯವಾಗಿ ಪಠ್ಯಕ್ರಮಗಳಲ್ಲಿ ಓದಿ ಅರ್ಥಮಾಡಿಕೊಳ್ಳುವ ಮತ್ತು ಅದರ ಬಗ್ಗೆ ತರ್ಕಿಸುವ ಜವಾಬ್ದಾರಿ ಭಾಷಾ ತರಗತಿಯಲ್ಲೇ ಕೇಂದ್ರೀಕರಿಸಲ್ಪಟ್ಟಿರುತ್ತದೆ ಇಲ್ಲವೆ ಆ ತರಗತಿಗೇ ಸೀಮಿತವಾಗಿರುತ್ತದೆ. ಅಲ್ಲಿ ಕೂಡ ಈ ಬಗ್ಗೆ ಹೆಚ್ಚು ಕೆಲಸ ಆಗುವುದಿಲ್ಲ. ತರಗತಿಯ ಪ್ರಕ್ರಿಯೆಯಲ್ಲಿ, ಅಭ್ಯಾಸದ ತಯಾರಿಕೆ ಮತ್ತು ನೀಡಲಾಗಿರುವ ಪ್ರಶ್ನೆಗಳನ್ನು ಪರಿಹರಿಸುವ ರೀತಿಯಲ್ಲಿ ಮತ್ತು ಶಿಕ್ಷಕನ ಬುದ್ಧಿಯಲ್ಲೂ ಇದು ಪ್ರಧಾನ ರೂಪದಲ್ಲಿರುವುದಿಲ್ಲ. ನಿಜ ಹೇಳಬೇಕೆಂದರೆ ಪ್ರತಿಯೊಂದು ವಿಷಯದ ಪುಸ್ತಕ ಮತ್ತು ತರಗತಿಯ ಪ್ರಕ್ರಿಯೆಯಲ್ಲಿ ಇದರ ಕಡೆಗೆ ಹೆಚ್ಚು ಗಮನ ಕೊಡಬೇಕಾಗಿದೆ. ವಾಸ್ತವವಾಗಿ ವಿಜ್ಞಾನ, ಗಣಿತ, ಮತ್ತು ಸಾಮಾಜಿಕ ಅಧ್ಯಯನವೇ ಮೊದಲಾದವುಗಳ ಜ್ಞಾನ ಪುನರುಚ್ಚಾರ ಕೇಂದ್ರಿತವಾಗಿರುವುದರಿಂದ ಇದನ್ನು ಮಾಡುವ ವಾಸ್ತವಿಕ ಅಗತ್ಯ ಬರುವುದಿಲ್ಲ. ಇದರ ಹೊರತಾಗಿ ಪಠ್ಯಕ್ರಮದ ತಿಳಿವಳಿಕೆಯ ಕಾರಣ, ಪಠ್ಯಪುಸ್ತಕವನ್ನು ಮುಗಿಸುವ ಹೊಣೆಗಾರಿಕೆಯಿಂದಾಗಿ ಇದಕ್ಕೆ ಸ್ಥಳವೇ ಉಳಿಯುವುದಿಲ್ಲ. ಅಭ್ಯಾಸಗಳಲ್ಲಿ ಮತ್ತು ಸಂಗ್ರಹಣೆಯಲ್ಲಿ ಕಥನಗಳನ್ನು ಪರೀಕ್ಷಿಸಲು ಅವುಗಳ ತಾರ್ಕಿಕ ಆಧಾರ ತಿಳಿಯುವ ಮತ್ತು ಅದರ ಕುರಿತಾಗಿ ಏನಾದರೂ ಮಾಡಬೇಕೆಂಬ ಅಪೇಕ್ಷೆ ಇರುವಂಥ ಕೆಲಸಗಳು ಆಗುವುದಿಲ್ಲ. ವಿಜ್ಞಾನದ ಪುಸ್ತಕಗಳಲ್ಲಿ– ಕೊಟ್ಟಿರುವ ಸೂಚನೆಗಳನ್ನು ಓದಿ ಕಲಿಯುವವರು ತಾವೇ ಪ್ರಯೋಗ ಮಾಡುತ್ತಾರೆ ಮತ್ತು ಅವುಗಳ ಆಧಾರದ ಮೆಲೆ ಕೆಲವು ಕಥನಗಳನ್ನು ಪರೀಕ್ಷಿಸುತ್ತಾರೆ ಎನ್ನುವ ಅಪೇಕ್ಷೆ ಕೂಡ ಇರುವುದಿಲ್ಲ. ಅವರುಗಳು ತಾವೇ ಕಥನಗಳನ್ನು ಮಾಡುತ್ತಾರೆಂದು ಅವುಗಳ ಸಲುವಾಗಿ ಪರೀಕ್ಷೆಯ ಸಾಧನಗಳನ್ನು ಹುಡುಕಿ ಪ್ರಯೋಗ ಮಾಡಿ ಬರೆಯುತ್ತಾರೆಂದು ಯೋಚಿಸಲು ಕೂಡ ಸಾಧ್ಯವಿಲ್ಲ. ಇದೇ ರೀತಿ ಗಣಿತದಲ್ಲಿ ಭಾಷೆಯ ಬಳಕೆಗೆ ಅವಕಾಶ ಮಾಡುವುದು ಮತ್ತು ಗಣಿತದ ಭಾಷೆಯನ್ನು ಓದುವ ಅಭ್ಯಾಸ ಮಾಡುವುದು; ಅದರಲ್ಲಿ ಗಣಿತವನ್ನು ಬರೆಯುವ ಭಾಷೆ ಅಗತ್ಯವಾದ ಹೆಜ್ಜೆ. ಗಣಿತವನ್ನು ವ್ಯಕ್ತಪಡಿಸುವ ಸಂಕ್ಷಿಪ್ತತೆ, ನಿಖರತೆ, ನಿಯತವಾದ ಮತ್ತು ನಿಯಮನಿಷ್ಠ ವಾದ ಭಾಷೆ ಮತ್ತು ಇದರ ಜೊತೆ ಜೊತೆಯಲ್ಲಿ ಸಾಮಾನ್ಯೀಕರಿಸಿದ ಗಣಿತಕ್ಕೆ ಸಂಬಂಧಿಸಿದ ಕಥನಗಳನ್ನು ಅರ್ಥಮಾಡಿಸುವುದು ಮತ್ತು ಇದರ ಹೊರತಾಗಿ ಪ್ರತೀಕಗಳಲ್ಲಿ ಬರೆಯಲಾದ ಇಂಥ ಕಥನಗಳನ್ನು ಸಾಮಾನ್ಯ ಭಾಷೆಯಲ್ಲಿ ಬರೆಯುವಂಥ ಕಾರ್ಯಗಳನ್ನು ಒಳಗೊಂಡಿರುವ ಗಣಿತದ ಭಾಷೆಯನ್ನು ಕಲಿಯುವುದು ಆತ್ಮನಿರ್ಭರನಾಗುವಲ್ಲಿ ಅಗತ್ಯವಾದ ಹೆಜ್ಜೆಗಳು. ಈ ಬಗೆಯ ಕಾರ್ಯಗಳ ಅಭ್ಯಾಸ ಆಗುತ್ತಿಲ್ಲ. ಇದೇ ರೀತಿ ಭಾಷೆಯ ಬಳಕೆ ಮತ್ತು ಬಾಲಕನ ಸಾಮಾನ್ಯ ಅನುಭವಗಳ ಮಾಧ್ಯಮದ ಮೂಲಕ ಗಣಿತಕ್ಕೂ ಸಾಮಾನ್ಯ ಜೀವನಕ್ಕೂ ಸಂಬಂಧವನ್ನು ಏರ್ಪಡಿಸುವ ಅಭ್ಯಾಸ ಹಾಗೂ ಅದರಿಂದ ನಿಧಾನವಾಗಿ ಅಮೂರ್ತೀಕರಣ ಮಾಡುತ್ತ ಅದರಿಂದ ಬೇರೆಯಾಗುವುದರ ಹೊರತಾಗಿಯೂ ಅದರ ಬಳಕೆಯ ಅವಕಾಶಗಳನ್ನು ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಕಂಡುಕೊಳ್ಳುವ ಸಾಮರ್ಥ್ಯ ಮಹತ್ವದ್ದು. ಗಣಿತದಲ್ಲಿ ಆತ್ಮವಿಶ್ವಾಸ

ಮೂಡಿಸುವ ಸಲುವಾಗಿ ಈ ಬಗೆಯ ಅಂತರ್ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವುದು ತುಂಬ ಅಗತ್ಯವಿದೆ. ಕವಿತೆ ಇಲ್ಲವೆ ಕಥೆಗಳು ಸೇರಿರುವ, ವಿಜ್ಞಾನ, ಗಣಿತ, ಮತ್ತು ಸಾಮಾಜಿಕ ಅಧ್ಯಯನದ ಪುಸ್ತಕಗಳು ಮತ್ತು ಭಾಷೆಯ ಪುಸ್ತಕಗಳ ಪಾಠಗಳನ್ನು ಓದುವುದು ಮತ್ತು ಅವುಗಳ ಮುಖ್ಯ ವಿಷಯಗಳನ್ನು, ಅಂತರ್ ಸಂಬಂಧಗಳನ್ನು ಇಲ್ಲವೆ ಅವುಗಳಲ್ಲಿ ಅಡಗಿರುವ **ದ್ವಂದ್ವಗಳನ್ನು( ಅಸಮಮಂಜಸತೆಗಳನ್ನು)** ತಿಳಿದುಕೊಳ್ಳುವುದು ಮತ್ತು ಅವುಗಳನ್ನು ವಿಶ್ಲೇಷಿಸುವುದು. ಇದಕ್ಕಾಗಿ ಕೆಲವು ಯಾವುದಾದರೂ ಬಗೆಯ ದ್ವಂದ್ವ ಪರಿಸ್ಥಿತಿಗಳನ್ನು ಪ್ರಸ್ತುತಪಡಿಸಿರುವಂಥ ಕಥೆಗಳು, ಕವಿತೆಗಳು, ಸಂದರ್ಭಗಳು, ಅನುಭವಗಳು ಅವಲೋಕನಗಳು ಅಥವಾ ವಿಶ್ಲೇಷಣೆಗಳನ್ನು ಸೇರಿಸಬೇಕಾಗುತ್ತದೆ. ಆ ದ್ವಂದ್ವಗಳನ್ನು (ಅಸಂಮಜಸತೆಗಳನ್ನು) ಗುರುತಿಸುವುದು ಮತ್ತು ಇದರಲ್ಲಿ ಅವನು ಏನು ಯೋಚಿಸುತ್ತಾನೆ, ಅದನ್ನು ಅವನು ಹೇಗೆ ನಿಭಾಯಿಸುತ್ತಾನೆ ಎಂದು ಯೋಚಿಸುವುದು ಮತ್ತು ಇತರೆಯವರ ಪರಿಹಾರಗಳನ್ನು ಕೇಳುವುದು. ಅವುಗಳಿಗೆ ಆಧಾರವೇನೆಂದು ತಿಳಿದುಕೊಳ್ಳುವುದು ಮತ್ತು ಅಂಥ ದ್ವಂದ್ವ ಪರಿಸ್ಥಿತಿಯಲ್ಲಿ ಸಮಸ್ಯೆ ಮತ್ತು ಸಂಕಟವೇನೆಂದು ತಿಳಿಯುವುದು. ಆ ಸಮಸ್ಯೆಗೆ ಅವನು ಯೋಚಿಸಿದ್ದ ಪರಿಹಾರ ಯಾವುದು ಅದನ್ನೂ ಪರೀಕ್ಷಿಸುವುದು. ಮೂಲ ಸಂಗತಿಯೆಂದರೆ ಓದುವುದು ಎಂಬುದು ಒಂದು ಯಾಂತ್ರಿಕ ಪ್ರಕ್ರಿಯೆ ಅಲ್ಲ. ಈ ಸಾಮರ್ಥ್ಯವು ಅರ್ಥಮಾಡಿಕೊಳ್ಳುವುದರ ಗಾಢವಾದ ಆಯಾಮಗಳು ಮತ್ತು ಪರಿಕಲ್ಪನೆಗಳ ಬೆಳವಣಿಗೆಯೊಂದಿಗೆ ತಳುಕುಹಾಕಿಕೊಂಡಿರುವುದರ ಜೊತೆ ಜೊತೆಗೆ ಆಲೋಚನೆಯ ಬೆಳವಣಿಗೆ, ಧೈರ್ಯ, ಮತ್ತು ಏಕಾಗ್ರವಾಗಿದ್ದುಕೊಂಡು ಏನನ್ನಾದರೂ ನಿರ್ಮಿಸುವ ಸಾಮರ್ಥ್ಯದೊಂದಿಗೆ ತಳುಕುಹಾಕಿಕೊಂಡಿದೆ. ಆದ್ದರಿಂದ ಉನ್ನತ ಪ್ರಾಥಮಿಕ ತರಗತಿಯಲ್ಲಿ ಧೈರ್ಯ ಮತ್ತು ಏಕಾಗ್ರತೆಯಿಂದ ಓದುವ ಅಭ್ಯಾಸ ಅನಿವಾರ್ಯ. ಪರಿಕಲ್ಪನೆಗಳು ಮತ್ತು ಪಾಠಗಳ ಬಗೆಗಿನ ಶಿಕ್ಷಕರ ವ್ಯಾಖ್ಯಾನ ಮತ್ತು ತಿಳಿವನ್ನು ನೆನಪಿಟ್ಟುಕೊಳ್ಳುವುದಲ್ಲ.

**ಅಭಿವ್ಯಕ್ತಿಯನ್ನು ಬರೆಯುವುದು ಮತ್ತು ಇತರೆ ವಿಷಯ**

ಸಾಮಾನ್ಯವಾಗಿ ಅಭಿವ್ಯಕ್ತಿಯ ಅರ್ಥವನ್ನು ಬಹಳ ಸೀಮಿತವೆಂದು ಪರಿಗಣಿಸಲಾಗುತ್ತದೆ. ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಹಂತದಲ್ಲಿ ಮೌನ(ನಿಶ್ಶಬ್ದ) ಆತ್ಮಾಭಿವ್ಯಕ್ತಿಯಿಂದ ತನ್ನೊಂದಿಗೇ ಸಂವಾದ ನಡೆಸುವ ಮೂಲಕ ತನ್ನ ಕಾರ್ಯವನ್ನು ಸಂಚಾಲನಗೊಳಿಸುವುದು ಮತ್ತು ತನ್ನ ಅನುಭವವನ್ನು ಎಲ್ಲರೊಂದಿಗೆ ಹಂಚಿಕೊಳ್ಳುವ ಮಾತು ಇದೆಯಾದರೂ ಉನ್ನತ ಪ್ರಾಥಮಿಕ ಹಂತದ ವರೆಗೆ ಬರುತ್ತ ಬರುತ್ತ ತರಗತಿಗಳ ಸಂದರ್ಭದಲ್ಲಿ ಇದರ ಅರ್ಥ ನಿಬಂಧ, ಪತ್ರವೇ ಮೊದಲಾದುವುಗಳಿಗಷ್ಟೇ ಸೀಮಿತಗೊಳ್ಳುತ್ತದೆ. ಅಭಿವ್ಯಕ್ತಿಯನ್ನು ಇದಕ್ಕಿಂತ ವ್ಯಾಪಕವಾದ ಅರ್ಥದಲ್ಲಿ ತಿಳಿದುಕೊಳ್ಳುವ ಪ್ರಕ್ರಿಯೆಯೊಂದಿಗೆ ಉಚಿತವಾದ ಕಾರ್ಯದ ರೂಪದಲ್ಲಿ ನೋಡಲಾಗುವುದಿಲ್ಲ. ಮಕ್ಕಳು ಬಾಯಿಮಾತಿನ ರೂಪದಲ್ಲಿ ಬಹಳಷ್ಟನ್ನು ಹೇಳಿಬಿಡುತ್ತಾರೆ ಆದರೆ ಅದನ್ನು ಬರೆಯಲಾಗುವುದಿಲ್ಲ ಎಂಬ ಮಾತನ್ನು ಸಂವೇದನಾಶೀಲ ಶಿಕ್ಷಕರು ಹೇಳುವುದನ್ನು ಸಾಮನ್ಯವಾಗಿ ನಾವು ಕೇಳುತ್ತೇವೆ. ಇದು ಸಹಜ. ಕಾರಣ ಮಾತನಾಡುವ ಭಾಷೆ ಮತ್ತು ಬರವಣಿಗೆಯ ಭಾಷೆಗಳಿಗೆ ಹಾಗೂ ಅವುಗಳಿಗೆ ಅಗತ್ಯವಾದ ಮಾನಸಿಕ ಪ್ರಕ್ರಿಯೆಗಳಿಗೆ ವ್ಯತ್ಯಾಸವಿದೆ. ಇದನ್ನು ತಿಳಿದುಕೊಂಡ ಮೇಲೂ ವಿಷಯಗಳಿಗೆ ಸಂಬಂಧಿಸಿದ ತರಗತಿಗಳಲ್ಲಿ ನಾವೇ ಉತ್ತರಗಳನ್ನು ರೂಪಿಸುವುದಕ್ಕಿಂತ ಅದನ್ನು ಬಾಯಿಮಾತಿನಲ್ಲಿ ಹೇಳಿ ಮತ್ತು ಬರೆದು ನಮ್ಮ ಶಬ್ದಗಳಲ್ಲಿ ವ್ಯಕ್ತಪಡಿಸುವ ಬೇರೆ ಬೇರೆ ಅಭ್ಯಾಸಗಳಿರುವುದಿಲ್ಲ. ಇತರೆ ವಿಷಯಗಳ ತರಗತಿಯಲ್ಲಂತೂ ಈ ಕೆಲಸ ಭಾಷಾ ತರಗತಿಯದೇ ಎಂದು ಒಪ್ಪಲಾಗುತ್ತದೆ. ಆದರೆ ಇದು ಭಾಷಾ ತರಗತಿಯಲ್ಲೂ ಆಗುವುದಿಲ್ಲ.

ಭಾಷಾ ತರಗತಿಯಲ್ಲಿ ಒಂದು ಕಡೆ ಎಲ್ಲದಕ್ಕೂ ಸಮಯವಿರುವುದಿಲ್ಲವಾದರೆ ಇನ್ನೊಂದು ಕಡೆ ಭಾಷೆಯನ್ನು ಕಲಿಸುವವರು ಇತರೆ ವಿಷಯಗಳ ಸಂದರ್ಭದಲ್ಲಿ ಓದುವುದು ಮತ್ತು ಬರೆಯುವುದನ್ನು ಕಲಿಯಲು ಅವುಗಳ ತರಗತಿಯಲ್ಲಿ ಅವಕಾಶಗಳು ಇರಬೇಕು ಎಂಬುದನ್ನು ಸಾಮಾನ್ಯವಾಗಿ ಒಪ್ಪುವುದಿಲ್ಲ. ಆದರೆ ನಾವು ಯಾವುದೇ ವಿಷಯ ಕುರಿತು ಮಾತನಾಡಿದರೂ ಪ್ರತಿ ತರಗತಿಯಲ್ಲಿ ಮತ್ತು ಪ್ರತಿ ಟೆಕ್ಸ್ಟ್ ನ ಜೊತೆಯಲ್ಲಿ ಕಾರ್ಯದಲ್ಲಿ ಬಾಲಕನು ಪಾಠವನ್ನು ತನ್ನ ಶಬ್ದಗಳಲ್ಲಿ ಅರ್ಥಮಾಡಿಕೊಳ್ಳುವುದಕ್ಕೆ ಮತ್ತು ಕೈ ಬರಹವನ್ನು ತನಗಷ್ಟೇ ಅಲ್ಲದೆ ಅನ್ಯರಿಗೂ ತಿಳಿಯಪಡಿಸುವುದಕ್ಕೆ ಎಡೆಯಿರಬೇಕು ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ. ಅಂದರೆ ಮೂಲ ಸಂಗತಿಗಳನ್ನು ಗುರುತಿಸುವುದು ಮತ್ತು ಇದರಿಂದಲೇ ಪ್ರಶ್ನೆಗಳೂ ಪರಿಹಾರವಾಗಿ ಬಿಡುತ್ತವೆ. ಪ್ರಶ್ನೆಯ ಮೂಲ ಮಾಹಿತಿಯನ್ನು ತಿಳಿದುಕೊಂಡು ಅದು ಎಲ್ಲಿಗೆ ಹೋಗಬೇಕಾಗಿದೆ, ಅದರ ದಾರಿ ಯಾವುದು ಎಂಬುದನ್ನು ನಿರ್ಣಯಿಸಬಲ್ಲವನಾಗುತ್ತಾನೆ. ಉಳಿದ ಮಾಹಿತಿಯಿಂದ ಆಗುವ ಲಾಭವೇನು, ಅದರಿಂದ ಇನ್ನೇನಾದರೂ ತೀರ್ಮಾನ ಹೊರಹೊಮ್ಮಬಹುದೆ ಎಂಬುದನ್ನೆಲ್ಲ ತಿಳಿದುಕೊಂಡು ಆ ತಿಳಿವನ್ನು ಬೇರೆಯವರಿಗೆ ಅಲ್ಲದಿದ್ದರೂ ಕನಿಷ್ಠಪಕ್ಷ ತನಗೇ ಆದರೂ ವ್ಯಕ್ತಪಡಿಸಲು ಸಾಧ್ಯವಾಗಬೇಕು.

ಒಟ್ಟಾರೆ ನಾವು ಸಮಸ್ಯೆಯನ್ನು ಬಗೆಹರಿಸುವ ಮಾತಾಡಿದಾಗ ಪ್ರಶ್ನಿಸುವ ವಿಷಯದ ಬಗ್ಗೆ ಮಾತಾಡುತ್ತೇವೆ ಮತ್ತು ಅದನ್ನು ಮಕ್ಕಳು ತಾವೇ ಗುಂಪಿನಲ್ಲಿ ಮಾಡುವುದಾದರೆ ಅದು ತಿಳಿವು ಮತ್ತು ಅಭಿವ್ಯಕ್ತಿಯ ಬೆಳವಣಿಗೆಗೆ ತುಂಬ ಮಹತ್ವದ್ದು. ಇದೇ ಕಾರಣಕ್ಕಾಗಿ ಎನ್ ಸಿ ಎಫ್ 2005 ರ ನಂತರ ಮತ್ತು ಎನ್ ಇಪಿ 2020ರಲ್ಲಿ ಕೂಡ ಸಹೋದ್ಯೋಗಿಗಳೊಂದಿಗೆ ಸೇರಿಕೊಂಡು ಕೆಲಸ ಮಾಡುವುದರ ಮೇಲೆ ಒತ್ತು ನೀಡಲಾಗಿದೆ.

ಆದರೆ ಇದು ಎಲ್ಲ ತರಗತಿಗಳಲ್ಲಿಯೂ ಬಿಟ್ಟುಹೋಗುತ್ತದೆ. ಎಲ್ಲಿಯವರೆಗೆಂದರೆ  ಆಗೊಮ್ಮೆ ಈಗೊಮ್ಮ ಕೆಲವು ಪುಸ್ತಕಗಳಲ್ಲಿ  ಇದನ್ನು ಸೂಚಿಸಿದ್ದರೂ ತರಗತಿಯಲ್ಲಿ ಇದಕ್ಕೆ ಅವಕಾಶ ಸಿಗುವುದಿಲ್ಲ. ಈ ಕಾರಣದಿಂದಾಗಿಯೇ ಯಾವುದೇ ವಿಷಯದ ಸಂದರ್ಭದಲ್ಲಿ  ಪಾಠಗಳಲ್ಲಿ ಈ ಅಪೇಕ್ಷೆ ಇರಬೇಕು, ಇಲ್ಲವೆ ಈ ಅಭ್ಯಾಸಗಳಿರಬೇಕು, ಮಕ್ಕಳೊಂದಿಗೆ ಇದ್ದುಕೊಂಡು ಏನು ಗೊತ್ತಿದೆಯೋ ಅದನ್ನು ವ್ಯಕ್ತಪಡಿಸಲು, ತನಗಾಗಿ ನೋಟ್ ಮಾಡಿಕೊಳ್ಳಲು ಎಡೆಯಿರಬೇಕು ಎಂಬೀ ಎಲ್ಲ ಸಂಗತಿಗಳನ್ನೂ ನೆನಪಿನಲ್ಲಿಟ್ಟುಕೊಂಡು ಅವುಗಳನ್ನು ಸಿದ್ಧಪಡಿಸಬೇಕು. ಇದರ ಜೊತೆ ಜೊತೆಗೆ ಶಿಕ್ಷರು ಇದರ ಲಾಭ ಮತ್ತು ಮಹತ್ವವನ್ನು ತಿಳಿದುಕೊಳ್ಳುವಂಥ ಪ್ರಯತ್ನವಿರಲಿ.

ಭಾಷೆ ಮತ್ತು ಇತರೆ ವಿಷಯಗಳ ತರಗತಿಗಳು ಮಾಡಬೇಕಾದ್ದು ಮಕ್ಕಳು ಟೆಕ್ಸ್ಟ್ ಅನ್ನು ಓದಿ ಮತ್ತು ಕೆಲವು ಸಮಸ್ಯೆ ಬಗೆಹರಿಸಬೇಕೆನ್ನುವಂಥ  ಬೇಡಿಕೆ ಇದ್ದರೆ ಅವುಗಳ ಬಗ್ಗೆ ಯೋಚಿಸಿ ತನ್ನ ಯೋಜನೆಯನ್ನು ವ್ಯಕ್ತಪಡಿಸಲು ಸಮರ್ಥರಾಗುವ ಮತ್ತು ಆ ಯೋಜನೆಯನ್ನು ನಿಧ ನಿಧಾನವಾಗಿ ಸುಧಾರಿಸಿ ತನ್ನ ಅಲ್ಗೊರಿದಮ್ ಮಾಡುವ ಪ್ರಯತ್ನ ಮಾಡುವುದು ಮತ್ತು ತಮ್ಮ ಈ ಸಾಮರ್ಥ್ಯವನ್ನು ಸಿದ್ಧಪಡಿಸುವುದು.  ಅಂದರೆ ತಿಳಿದುಕೊಳ್ಳಲು ಮತ್ತು ಪ್ರಶ್ನೆಯನ್ನು ಬಗೆಹರಿಸಲು ಷಾರ್ಟ್ ಕಟ್ ಗೆ ಅವಕಾಶ ಕೂಡದೆ ಯಾವ ರೀತಿಯಲ್ಲಿ ಯಾವುದೇ ಪ್ರಶ್ನೆಯನ್ನು ಇಲ್ಲವೆ ಯಾವುದೇ ಸಮಸ್ಯೆಯನ್ನು ಬಗೆಹರಿಸಬೇಕು ಎಂಬುದನ್ನು ಕುರಿತು ಯೋಚಿಸಲು  ಮತ್ತು ಅದನ್ನು ವ್ಯಕ್ತಪಡಿಸಲು, ಅದರ ಕುರಿತು ಸಂವಾದ ನಡೆಸಲು ಅವಕಾಶ ನೀಡಬೇಕು. ಮುಂದುವರಿಯಲು, ತಾನು ತಿಳಿದುಕೊಂಡಿರುವುದನ್ನು  ತನ್ನದೇ ಆದ ರೀತಿಯಲ್ಲಿ, ತನ್ನದೇ ಶಬ್ದಗಳಲ್ಲಿ ಬರೆಯುವುದು ನಂತರದಲ್ಲಿ ತಾನೇ ಇನ್ನಷ್ಟು ಕಲಿತು ಮುಂದೆ ಸಾಗುವ ಮಾರ್ಗವಾಗಿದೆ. ಸಾಮಾಜಿಕ ಅಧ್ಯಯನ ಮತ್ತು ವಿಜ್ಞಾನದ ತರಗತಿಯ ಸಮಸ್ಯೆಗಳಲ್ಲಿ ಇಡೀ ಟೆಕ್ಸ್ಟ್ ಅನ್ನು ಅರ್ಥಮಾಡಿಕೊಳ್ಳಲು ತನ್ನ ತಿಳಿವನ್ನು  ಸಾರ ರೂಪದಲ್ಲಿ ಅಭಿವ್ಯಕ್ತಿಸುವುದನ್ನು ಆಗುಮಾಡಿಕೊಳ್ಳುವುದು ಫಲಪ್ರದ. ಇದೇ ರೀತಿ ಗಣಿತದಲ್ಲಿ ತನ್ನ ಆಲೋಚನೆ ಮತ್ತು ತರ್ಕದ ಮೇರೆಗೆ ಗಣಿತಕ್ಕೆ ಸಂಬಂಧೀಸಿದ ಕಥನಗಳನ್ನು ಗಣಿತದ ಭಾಷೆಯಲ್ಲಿ ಸಂಕ್ಷಿಪ್ತವಾಗಿ ವ್ಯಕ್ತಪಡಿಸಬೇಕು ಮತ್ತು ಅನಂತರ ಅವನ್ನು ಸಂಕೇತ ಮತ್ತು ಚಿಹ್ನೆಗಳನ್ನು ಬಳಕೆಮಾಡುವ ಗಣಿತದ ಭಾಷೆಯಲ್ಲಿ ಬರೆದುಬಿಡುವುದು ಬಹಳಷ್ಟು ಸಲ ಪ್ರಶ್ನೆಯನ್ನು ಬಗೆಹರಿಸುವಲ್ಲಿ ಅವಶ್ಯಕವೇ ಆಗುತ್ತದೆ. ಆದರೆ ಆತ್ಮವಿಶ್ವಾಸವೂ ಅತಿ ಅಗತ್ಯ. ಹೀಗೆ ಬೇರೆ ಬೇರೆ ರೂಪಗಳಲ್ಲಿ ಅಭಿವ್ಯಕ್ತಿಸುವ ಅವಶ್ಯಕತೆ ಇತರೆ ವಿಷಯಗಳಲ್ಲೂ ಉಂಟಾಗುತ್ತದೆ. ಆದರೆ ಯಾವುದೇ ವಿಷಯದಲ್ಲೂ ಈ ಬಗ್ಗೆ ಗಮನ ನೀಡಲಾಗುತ್ತಿಲ್ಲ.  ಪರಿಕಲ್ಪನೆಗಳ ವಿಸ್ತರಣೆ, ಮತ್ತು ಅನುಭವಗಳ ಅಮೂರ್ತೀಕರಣವು ಪ್ರಾಥಮಿಕ ಹಂತದಲ್ಲಿ ಪ್ರಾರಂಭವಾಗಿಬಿಡುತ್ತಾದ ಕಾರಣ, ಕಲಿಯುವವರು ತಮ್ಮ ತಿಳಿವನ್ನು ಇತರೆಯವರೊಂದಿಗೆ ಹಂಚಿಕೊಂಡು ಅವರ ತಿಳಿವಳಿಕೆ ಅರಿತುಕೊಂಡು ಸಂವಾದ ಮಾಡುವುದಕ್ಕೆ ಸಾಧ್ಯವಾಗುವಂಥ ಈ ಬಗೆಯ ಅಭಿವ್ಯಕ್ತಿಗಳಿಗೆ ಸಾಕಷ್ಟು  ಅವಕಾಶಗಳಿರಬೇಕು. ಅಭಿವ್ಯಕ್ತಿಯು ಕೇವಲ ಕಲಾತ್ಮಕ ಇಲ್ಲವೆ ರಚನಾತ್ಮಕವಾಗಿ ಇರುವುದಿಲ್ಲ ಹಾಗೂ ಅಂತಿಮ ಉತ್ಪಾದನೆಯೂ ಇರುವುದಿಲ್ಲ ಎಂಬುದನ್ನು ರೇಖಾಂಕಿತಗೊಳಿಸುವುದು ಅತ್ಯಗತ್ಯ. ಅದು ತನ್ನೊಂದಿಗಷ್ಟೇ ಅಲ್ಲದೆ ಅನ್ಯರೊಂದಿಗೆ ಸಂಭಾಷಣೆ ನಡೆಸುವ ರೀತಿಯೂ ಹೌದು. ಅಭಿವ್ಯಕ್ತಿಯ ಅಂತಿಮ ಉತ್ಪಾದನೆ ಮತ್ತು ಇತರೆಯವರಿಗೆ ಉಂಟಾಗುವ ತಿಳಿವು ವಿಶೇಷತಃ ಬರವಣಿಗೆಯ ಸಾಮಗ್ರಿಯ ಸಂದರ್ಭದಲ್ಲಿ ಅಭಿವ್ಯಕಿಯ ಬೆಳವಣಿಗೆಯಲ್ಲಿ ದೊಡ್ಡ ಅಡಚಣೆಯಾಗಿದೆ.

**ಕಾರ್ಯ ಕಾರಣ ಸಂಬಂಧ**

ಈ ಹಂತದಲ್ಲಿ ಭಾಷೆಯ  ಬೆಳವಣಿಗೆಗೆ ಬಹಳ ಮಹತ್ವದ್ದಾಗಿರುವ ಇನ್ನೊಂದು ಮಗ್ಗುಲು ಎಂದರೆ ಕಾರ್ಯಕಾರಣ ಸಂಬಂಧ. ಸಾಮಾನ್ಯವಾಗಿ ಕಾರ್ಯಕಾರಣ ಸಂಬಂಧವನ್ನು ಗೊತ್ತಿರುವ  ಉತ್ತರವನ್ನೊಳಗೊಂಡ ಪ್ರಶ್ನೆಗಳ ರೂಪದಲ್ಲಿ ಕೊಡಲಾಗುತ್ತದೆ. ಅದು ವಿಜ್ಞಾನವಾಗಿರಬಹುದು, ಸಾಮಾಜಿಕ ಅಧ್ಯಯನವಾಗಿರಬಹುದು,  ಗಣಿತವಾಗಿರಬಹುದು, ಅವೆಲ್ಲವುಗಳಲ್ಲಿ ತಮ್ಮ ತಮ್ಮ ವಿಷಯದ ಸ್ವಭಾವಕ್ಕೆ ತಕ್ಕಂತೆ ಕಾರ್ಯಕಾರಣ ಸಂಬಂಧಗಳು ಇರುತ್ತವೆ.  ಇವು ಬೇರೆ ಬೇರೆ ಬಗೆಯ ಆಧಾರಗಳಿಂದ ಆಗಿರುತ್ತವೆ. ಮತ್ತು ಪ್ರತಿಯೊಂದು ವಿಷಯಕ್ಕೂ  ಬೇರೆ ಬೇರೆ ರೀತಿಯವಾಗಿರುತ್ತವೆ. ಪಠ್ಯಕ್ರಮ ಮತ್ತು ಪಠ್ಯ ಪುಸ್ತಕಗಳಲ್ಲಿ ಇವುಗಳ ತಿಳಿವಿನ **ಬಗ್ಗೆ** ಕೆಲಸ ಆಗುವುದಿಲ್ಲ. ಓದುವವರು ಕಾರ್ಯಕಾರಣಗಳನ್ನು

ಗುರುತಿಸ ಬೇಕಾಗುವುದಿಲ್ಲ.  ಅವುಗಳನ್ನು ಹುಡುಕುವುದು ಬೇಕಾಗುವುದಿಲ್ಲ. ಅವುಗಳನ್ನು ರೂಪಿಸುವುದು(ನಿರ್ಮಿಸು) ಬೇಕಾಗುವುದಿಲ್ಲ. ಅವುಗಳನ್ನು ಅವರಿಗೆ ಕೊಟ್ಟಿರುತ್ತದೆ. ಕಾರ್ಯಕಾರಣ ಸಂಬಂಧಗಳನ್ನು ರೂಪಿಸುವ ಪ್ರಯತ್ನ ಕೂಡ ಉನ್ನತ ಪ್ರಾಥಮಿಕ ತರಗತಿಗಳಲ್ಲಿ ಇರುವುದು ಶಿಕ್ಷಣದ ಪ್ರಕ್ರಿಯೆಗೆ ಬಹಳ ಮಹತ್ವದ್ದು. ಇದಲ್ಲದೆ ಕಾರ್ಯಕಾರಣ ಸಂಬಂಧದ ತಾರ್ಕಿಕತೆಯನ್ನು ವಿಶ್ಲೇಷಿಸುವ ಪ್ರಯತ್ನವೂ ತರಗತಿಗಳಲ್ಲಿ ನಡೆಯಲಿ. ಕಾರ್ಯಕಾರಣ ಸಂಬಂಧವನ್ನು ಹುಡುಕುವ ಅವಕಾಶಗಳು ಮತ್ತು ಕಾರ್ಯಕಾರಣ ಸಂಬಂಧವನ್ನು ರೂಪಿಸುವುದರ ಅವಕಾಶಗಳು ಹಾಗೂ ಅವುಗಳ ಹೊರತಾಗಿ ಬೇರೆಯವರ ಮೂಲಕ ರೂಪಿಸಲ್ಪಟ್ಟ ಕಾರ್ಯಕಾರಣ ಸಂಬಂಧ ಮತ್ತು ತಾನು ರೂಪಿಸಿದ ಕಾರ್ಯಕಾರಣ ಸಂಬಂಧಗಳ ಮೇಲೆ ಚರ್ಚೆ ಮತ್ತು ತುಲನೆ ಮಾಡುವಂಥ ಅವಕಾಶಗಳು ಇರಬೇಕು.  ಏನು ನಡೆಯುತ್ತಿದೆ ಅದನ್ನು ತಿಳಿದುಕೊಂಡು ಒಂದು ರೀತಿಯಲ್ಲಿ ಅದರ ಸಾರವನ್ನು ಸಿದ್ಧಪಡಿಸಿದ ಮೇಲೆ ಅವುಗಳಲ್ಲಿ ಪರಸ್ಪರ ಸಂಬಂಧವನ್ನು ಕಂಡುಕೊಳ್ಳುವಂಥ ಪರಿಸ್ಥಿತಿಗಳ ವಿವರಗಳು ಅವನ ಹತ್ತಿರ ಇರಲಿ. ಕಾರ್ಯಕಾರಣ ಸಂಬಂಧಕ್ಕೆ ಎಲ್ಲ ವಿಷಯಗಳಲ್ಲಿ ಎಡೆ ಇರಬೇಕು. ಆದರೆ ಇದನ್ನು ಕೃತ್ರಿಮವಾದ ರೀತಿಯಿಂದ ಮಾಡಲಾಗುವುದಿಲ್ಲ. ಇದನ್ನು ಮಾಡಬೇಕೆಂದಿದ್ದರೆ ಟೆಕ್ಸ್ಟ್ ಅನ್ನು ಅತ್ಯಂತ ಗಮನವಿಟ್ಟು ಆಯ್ಕೆಮಾಡಬೇಕು. ಸಾಹಿತ್ಯಕ್ಕೆಂದು ಆಯ್ಕೆ ಮಾಡಿದ ಟೆಕ್ಸ್ಟ್ ಸಹಜವಾಗಿರಬೇಕು ಮತ್ತು ಗಾಢವಾಗಿ ರಚಿಸಲ್ಪಟ್ಟವಾಗಿರಬೇಕು. ರೋಚಕವಾಗಿಯೂ ದೀರ್ಘಕಾಲದ ವರೆಗೂ ಉಳಿಯಬೇಕಾಗಿರುವಂಥ ಟೆಕ್ಸ್ಟ್‌ಗಳಿಗೆ ಅವುಗಳದೇ ಆದ ಸ್ವಾಭಾವಿಕವಾದ ಗುಣಗಳಿರುತ್ತವೆ. ಅವುಗಳಲ್ಲಿ ಕ್ರಮಬದ್ಧತೆ ಇರುತ್ತದೆ. ರೋಚಕತೆ ಇರುತ್ತದೆ. ಸುಗಠಿತವಾಗಿರುತ್ತವೆ ಮತ್ತು ಅವುಗಳಲ್ಲಿ ಕಾರ್ಯಕಾರಣ ಸಂಬಂಧ ಒಳಗೆ ಅಡಗಿಯೇ ಇರುತ್ತದೆ. ಈ ಗುಣವಿಲ್ಲದಿದ್ದರೆ ಟೆಕ್ಸ್ಟ್  ಚೆನ್ನಾಗಿರುವುದಿಲ್ಲ ಮತ್ತು ಓದಬೇಕೆಂಬ ಇಚ್ಛೆ ಹುಟ್ಟಿಸುವಂತೆ ಇರುವುದಿಲ್ಲ. ಇಂಥ ಟೆಕ್ಸ್ಟ್ ಗಳಲ್ಲಿ ಬಹಳಷ್ಟು ಅಭ್ಯಾಸಗಳು ಇರಬಹುದು. ಆದರೆ ಒಂದು ಬಗೆಯ ಕಾರ್ಯಕಾರಣ ಸಂಬಂಧದ ಮೇಲೆ ಕೇಂದ್ರಿತವಾಗಿರಬಹುದು.  ಈಗೇನಾಯಿತೋ ಅದರಿಂದ ಒಂದು ಭಾಗ ಆಗದೆ ಬೇರೆ ಇನ್ನೇನಾದರೂ ಆಗಿದ್ದರೆ ಮುಂದಕ್ಕೆ ಏನಾಗುತ್ತೆ? ಎಂದು ಅವನನ್ನು ಕೇಳಬಹುದು. ಈ ಇಡೀ ಕಲ್ಪನೆ ಏನಿದೆ ಅದು ಘಟನಾಕ್ರಮವನ್ನು ಹೇಗೆ ಬದಲಾಯಿಸಬಲ್ಲುದು. ಕಾರ್ಯಕಾರಿ ಸಂಬಂಧದ ಬೆಳವಣಿಗೆಯಲ್ಲಿ  ಅದನ್ನು ಗುರುತಿಸುವುದನ್ನು ಹರಿತಗೊಳಿಸುತ್ತದೆ. ಇದರ ಜೊತೆಜೊತೆಯಲ್ಲಿ ಇದು ಕ್ರಮಬದ್ಧವಾದ ರೀತಿಯಲ್ಲಿ ಕಲ್ಪನೆಯನ್ನು ಮುಂದುವರಿಸುವ ಅವಕಾಶಗಳನ್ನು ನೀಡುತ್ತದೆ. ಇದು ಕಲ್ಪನೆಯನ್ನು ವ್ಯವಸ್ಥಿತಗೊಳಿಸುವ ಕಾರಣದಿಂದ ಹೊಸ ಕತೆಗಳನ್ನು  ರೂಪಿಸುವಲ್ಲಿ ನೆರವಾಗುತ್ತದೆ. ಆದ್ದರಿಂದ ಕಾರ್ಯಕಾರಣ ಸಂಬಂಧವನ್ನು ಹುಡುಕುವುದು, ಗುರುತಿಸುವುದು, ರೂಪಿಸುವುದು, ಈ ಮೊದಲಾದುವುಗಳೊಂದಿಗೆ ತಳುಕುಹಾಕಿಕೊಂಡಿದೆ. ಈ ಮುಂಚೆಯೇ ಹೇಳಿರುವಂತೆ ಇದು ಒಂದು ಕಡೆ ತಾರ್ಕಿಕ ಬೆಳವಣಿಗೆಯೊಂದಿಗೆ ತಳುಕು ಹಾಕಿಕೊಂಡಿದೆ ಮತ್ತು ಇದರ ಜೊತೆಜೊತೆಯಲ್ಲೇ ಇದು ವಿಷಯದ ತಿಳಿವಳಿಕೆ, ಪರಿಕಲ್ಪನೆಗಳ ತಿಳಿವಳಿಕೆ ಈ ಮೊದಲಾದವುಗಳೊಂದಿಗೆ ಸೇರಿಕೊಂಡಿದೆ. ಒಂದು ವೇಳೆ ಸಾಮಾಜಿಕ ಅಧ್ಯಯನದ ಕ್ಷೇತ್ರದ ಯಾವುದಾದರೂ ವಿಷಯದ ಟೆಕ್ಸ್ಟ್ ನಲ್ಲಿ ಕೊಟ್ಟಿರುವ ಸ್ಥಾನ ಮತ್ತು  ಘಟನಾಕ್ರಮದ ಯಾವುದಾದರೂ ತತ್ವವನ್ನು ಬದಲಿಸಿದರೆ ಆ ವಿಷಯದ ಪರಿಕಲ್ಪನೆಗಳು ವಿಷಯದ ಯಾವ ತಿಳಿವಳಿಕೆಯ ಆಧಾರದ ಮೇಲೆ ಮುಂದಿನ ಚಿತ್ರವನ್ನು ರೂಪಿಸಬೇಕಾಗುತ್ತದೆ. ವಿಜ್ಞಾನದ ಟೆಕ್ಸ್ಟ್ ನಲ್ಲಿ ವಿಜ್ಞಾನದ ಪರಿಕಲ್ಪನೆಗಳು ವಿಜ್ಞಾನದ ಆಲೋಚಿಸುವ ವಿಧಾನದಿಂದ ಮುಂದಕ್ಕೆ ಸಾಗುವ ಮಾತು ಬರುತ್ತದೆ.  ಅದರಲ್ಲಿ ಪರಿಸ್ಥಿತಿಯನ್ನು ಬದಲಾಯಿಸಿದ್ದರಿಂದ ಏನಾಗುತ್ತದೆ ಎಂಬುದಕ್ಕೆ ಉತ್ತರ ನೀಡುವಲ್ಲಿ ವಿಜ್ಞಾನದ ಪರಿಕಲ್ಪನೆಗಳು ಮತ್ತು ಸಿದ್ಧಾಂತಗಳ ಬಳಕೆಯಾಗುತ್ತದೆ.

ಇದೇ ಮಾತು ಗಣಿತ ವಿಷಯದ್ದೂ ಆಗಿದೆ. ಗಣಿತದಲ್ಲಿ ಯಾವುದಾದರೂ ಪಠ್ಯಪುಸ್ತಕದಲ್ಲಿ ಒಂದು ವೇಳೆ ಈ ಸಂಖ್ಯೆ ಇದ್ದರೆ ಅಥವಾ ಇದರ ಜಾಗದಲ್ಲಿ ಇಷ್ಟು ಹಣ ಕೊಟ್ಟಿದ್ದರೆ ಅಥವಾ ಕೊಡುವ ಬದಲು ತೆಗೆದುಕೊಂಡಿದ್ದರೆ  ಏನಾಗುತ್ತಿತ್ತು ಎಂಬ ಮಾತು ಬರುತ್ತದೆ. ಇದೆಲ್ಲವನ್ನೂ ಒಂದು ವೇಳೆ ಕಥೆಯ ರೂಪದಲ್ಲಿ , ಅದನ್ನು ಮುಂದುವರಿಸುವ ಪ್ರಶ್ನೆಯೊಂದಿಗೆ ಅಥವಾ ಯಾವುದಾದರೂ ಘಟನಾಕ್ರಮವನ್ನು ಮುಂದುವರಿಸಬೇಕೆಂದು ಬಾಲಕನ ಮುಂದಿದ್ದಾಗ ಬಾಲಕನಿಗೆ ಕಾರ್ಯಕಾರೀ ಸಂಬಂಧ ಮತ್ತು ಅದರ ಆಧಾರವಾದ ತರ್ಕವನ್ನು ಯೋಚಿಸಲು ಮತ್ತು ಆ ವಿಷಯದ ಪರಿಕಲ್ಪನೆಗಳೊಂದಿಗೆ ತಳುಕುಹಾಕುವ ಅಭ್ಯಾಸ ಮಾಡುವ ಅವಕಾಶ ದೊರೆಯುತ್ತದೆ.  ಈ ರೀತಿಯ ಅಭ್ಯಾಸಗಳು ಅನೇಕ ಸಲ ಟೆಕ್ಸ್ಟ್ ನಲ್ಲೂ ಇರುತ್ತವೆ; ಆದರೆ ಇವುಗಳ ಅತಿ ಕಡಿಮೆ ಬಳಕೆ ಆಗುತ್ತದೆ. ಇದು ಭಾಷಾ ತರಗತಿಯಲ್ಲೂ ಮತ್ತು ಇತರೆ ವಿಷಯಗಳ ತರಗತಿಗಳಲ್ಲೂ ಇರುವ ಬಗ್ಗೆ ಪಾಠಮಾಡುವವರು ಗಮನ ಕೊಡಬೇಕಾದ ಅಗತ್ಯವಿದೆ. ಇದು ಪ್ರತಿಯೊಂದು ವಿಷಯದಲ್ಲೂ ಮುಂದುವರೆಸುವ ಸಾಮರ್ಥ್ಯ ಹೊಂದಿದೆ. ಬಾಲಕನು ಒಟ್ಟಾರೆ ಹೆಚ್ಚು ಉತ್ತಮವಾದ ನಿರ್ಣಯವನ್ನು ತೆಗೆದುಕೊಳ್ಳಲು ಮತ್ತು ಪರಿಸ್ಥಿತಿಗಳನ್ನು ತಿಳಿದುಕೊಳ್ಳುವಲ್ಲಿ ಸಮರ್ಥರನ್ನಾಗಿ ಮಾಡುವ ರೀತಿಯಲ್ಲಿ

ಪ್ರಕ್ರಿಯೆ ಇರಲಿ. ಮೇಲೆ ನಾವು ಚರ್ಚಿಸಿರುವಂಥ ವಿಷಯಗಳೇನಿವೆ ಅವೆಲ್ಲವುಗಳ ಅಂತರಾರ್ಥ (ನಿಹಿತಾರ್ಥ) ಭಾಷೆಯ ತರಗತಿ ಎಲ್ಲ ವಿಷಯಗಳ ತರಗತಿಯೊಂದಿಗೆ ತಳುಕುಹಾಕಿಕೊಂಡಿದೆ. ಉಳಿದ ವಿಷಯಗಳ ತರಗತಿಗಳೂ ಪರಸ್ಪರ ತಳುಕುಹಾಕಿಕೊಂಡಿವೆ. ಆದರೆ ಭಾಷೆಯ ತರಗತಿಯೊಂದಿಗೆ ಈ ಎಲ್ಲ ವಿಷಯಗಳ ಹೆಚ್ಚು ಸ್ಪಷ್ಟವೂ ಮಹತ್ವಪೂರ್ಣವೂ ಆದ ಬೆಸುಗೆ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಉನ್ನತ ಪ್ರಾಥಮಿಕ ಹಂತದಲ್ಲಿ ಭಾಷೆಯ ತರಗತಿಯನ್ನು ರೂಪಿಸಬೇಕು. ಇತರೆ ವಿಷಯಗಳ ತರಗತಿಗಳಲ್ಲಿ ಭಾಷೆಯ ಭಾಗವನ್ನು ಸೇರಿಸುವ ಪ್ರಯತ್ನಮಾಡಬೇಕು.

**ನೂತನ ಜ್ಞಾನದವರೆಗೂ ತಲುಪುವುದು**

ಇನ್ನೂ ಒಂದು ಮಾತನ್ನು ಹೇಳುವುದು ಅಗತ್ಯ. ಅದೆಂದರೆ ಭಾಷೆಯ ಬೆಳವಣಿಗೆ ಒಂದು ಕಡೆ ಇತರೆ ವಿಷಯಗಳನ್ನು ತಿಳಿದುಕೊಳ್ಳುವುದರಲ್ಲಿ ನೆರವಾದರೆ, ಇನ್ನೊಂದು ಕಡೆ ಅದು ನೂತನ ಜ್ಞಾನದ ವರೆಗೆ ತಲುಪುವಲ್ಲಿ , ನೂತನ ಜ್ಞಾನವನ್ನು ಸೃಷ್ಟಿಸುವಲ್ಲಿ ನೆರವಾಗುತ್ತದೆ. ಹೊಸದು ಏನನ್ನೇ ಕಲಿಯುವುದಾದರೂ ಭಾಷೆಯೇ ಅದಕ್ಕೆ ಆಧಾರ. ಅದರ ಜೊತೆಜೊತೆಯಲ್ಲೇ ಭಾಷೆಯು ನಮ್ಮ ಮನಸ್ಸನ್ನೂ ನಿರ್ಮಿಸುತ್ತದೆ. ಸಾಂಸ್ಕೃತಿಕ, ಭಾನಾತ್ಮಕ, ಸೌಂದರ್ಯಬೋಧೆ ಮತ್ತು ಸರಿ–ತಪ್ಪುಗಳ ನಿರ್ಣಯ ಅಂದರೆ ಮೌಲ್ಯಗಳ ಬೆಳವಣಿಗೆ ಇವೆಲ್ಲವೂ ಭಾಷೆಯ ಪರಿಧಿಯಲ್ಲಿನ ಮಹತ್ವದ ಮಗ್ಗುಲುಗಳು ಎಂಬ ಮಾತನ್ನು ನಾವು ಮೇಲೆ ಹೇಳಿಯೇ ಇದ್ದೇವೆ. ಉನ್ನತ ಪ್ರಾಥಮಿಕ ಶಾಲೆಯಲ್ಲಿ ಇವುಗಳ ಬಗ್ಗೆ ಹೆಚ್ಚಿನ ಗಮನ ಕೊಡುವ ಅವಶ್ಯಕತೆ ಇದೆ. ಕಾರಣ ಇದೇ ವಯಸ್ಸಿನಲ್ಲಿ ಮಕ್ಕಳು ತಮ್ಮನ್ನು ತಾವು ತಿಳಿದುಕೊಳ್ಳುವ, ತಮ್ಮ ಆತ್ಮದ ಕಾಂತಿಯನ್ನು ನಿರ್ಮಿಸಿಕೊಳ್ಳುವ, ಮತ್ತು ತಮ್ಮ ಮೌಲ್ಯಗಳ ಬೆಳವಣಿಗೆ ಮಾಡಿಕೊಳ್ಳುವ, ಹಾಗೂ ಸರಿ–ತಪ್ಪುಗಳ ನಿರ್ಣಯಗಳ ತಳಹದಿಯನ್ನು ರೂಪಿಸಿಕೊಳ್ಳುವ ಪ್ರಕ್ರಿಯೆಯ ಮೂಲಕ ಸಾಗುತ್ತಿರುತ್ತಾರೆ. ಈ ಹೊತ್ತಿನಲ್ಲಿ ಅವರು ಹೊರಗಿನ ಪ್ರಪಂಚ ಮತ್ತು ಜನರೊಂದಿಗೆ ಅನುಸಂಧಾನ ನಡೆಸಿ ತನ್ನ ಕುಟುಂಬದಿಂದ ಹೊರ ನಡೆದು ಬಾಲ್ಯದಲ್ಲಿ ಅವನು ಏನನ್ನು ಕಲಿತನೋ ಅದಕ್ಕೂ ಹೊರ ಜಗತ್ತಿಗೂ ಇರುವ ಸಂಬಂಧವನ್ನು ತಿಳಿದುಕೊಳ್ಳುವ ಪ್ರಯತ್ನವನ್ನೂ ಮಾಡುತ್ತಾನೆ. ಈ ಅನುಸಂಧಾನದ ಸಂಚಾರದಲ್ಲಿ ಗಾಢವಾದ ಅಂತರ್ ದ್ವಂದ್ವಗಳನ್ನೂ ಎದುರಿಸಬೇಕಾಗುತ್ತದೆ. ಭಾಷಾ ತರಗತಿ ಇದೆಲ್ಲವನ್ನೂ ಹೇಗೆ ಒಗ್ಗೂಡಿಸಿಕೊಳ್ಳಬೇಕು ಎಂಬುದು ಒಂದು ಮಹತ್ವದ ಪ್ರಶ್ನೆ.

ಶಾಲಾ ತರಗತಿಯ ಸಂದರ್ಭದಲ್ಲಿ ನಾವು ಬಹುಭಾಷಿಕತೆ, ವಿವಿಧತೆ ಮತ್ತು ಸಮಾವೇಶದ ಮಾತಾಡುತ್ತೇವೆ. ಎಲ್ಲ ಬಗೆಯ ಸಾಂಸ್ಕೃತಿಕ ಸಂಪತ್ತಿನ ಬಗ್ಗೆ ನಮಗೆ ತಿಳಿವಳಿಕೆಯಿರಬೇಕು ಮತ್ತು ಅವುಗಳ ಬಗ್ಗೆ ಗೌರವವಿರಬೇಕು ಎಂದೆಲ್ಲ ಮಾತನಾಡುತ್ತೇವೆ. ಇದೇ ರೀತಿ ಹೊಸ ಜನಾಂಗದ ಜೀವನ ಶೈಲಿಯ ಬಗ್ಗೆಯೂ ಒಂದು ಸಕಾರಾತ್ಮಕವಾದ ಅನುಭವ ಮತ್ತು ಸಂವೇದನಾಶೀಲತೆ ಇರಬೇಕು. ಇದೇ ರೀತಿ ಬಾಲಕ ಒಂದು ಒಳ್ಳೆಯ ಚಿತ್ರವನ್ನು ನೋಡಿದಾಗ ಅದರಿಂದ ಅವನು ಆನಂದವನ್ನು ಪಡೆಯಲಿ, ಒಂದು ಒಳ್ಳೆಯ ಕವಿತೆಯನ್ನು, ಒಳ್ಳೆಯ ಕತೆಯನ್ನು ಓದಿದಾಗಲೂ ಆನಂದವನ್ನು ಹೊಂದಲಿ ಎಂದು ಆಗ್ರಹಿಸುತ್ತೇವೆ. ಅವನಿಗೆ ಬೇರೆಯವರ ವಿಷಯಕ್ಕೆ , ತನ್ನ ವಿಷಯಕ್ಕೆ ಒಂದು ಸಕಾರಾತ್ಮಕವಾದ ನಡೆ ಇರಲಿ ಎಂದು, ಬೇರೆಯವರಿಗೆ ಗೌರವ ಕೊಡಲಿ ಅವರ ಭಾವನೆಗಳನ್ನು ಗೌರವಿಸಲಿ ಎಂದು ನಾವು ಬಯಸುತ್ತೇವೆ. ಒಟ್ಟಾರೆ ಅವನಿಗೆ ತನ್ನ ಭಾವನೆಗಳು ಮತ್ತು ಬೇರೆಯವರ ಭಾವನೆಗಳ ಬಗ್ಗೆ ಗಮನಕೊಡುವುದು ಅಗತ್ಯವೆಂಬ ತಿಳಿವಳಿಕೆ ಬರಬೇಕು. ಇದೆಲ್ಲವೂ ಅವನ ಆತ್ಮ ಸೌಂದರ್ಯದ ಭಾಗವಾಗಬೇಕು. ಕಾರಣ ಎಲ್ಲಿಯವರೆಗೆ ಅವನಲ್ಲಿ ಆತ್ಮ ಸೌಂದರ್ಯದ ಅನುಭವ ಉಂಟಾಗುವುದಿಲ್ಲವೋ ಮತ್ತು ತನ್ನ ವಿಷಯಕ್ಕೆ ಒಂದು ಸಕಾರಾತ್ಮಕ ದೃಷ್ಟಿಕೋಣ ಉಂಟಾಗುವುದಿಲ್ಲವೋ ಅಲ್ಲಿಯವರೆಗೆ ಅವನು ಯಾವುದೇ ಪ್ರಕ್ರಿಯೆಯಲ್ಲಿ ತನ್ನ ಮಾತನ್ನು ಉಳಿಸಿಕೊಳ್ಳಲು ಅವನು ಹಿಂದೆಮುಂದೆ ನೋಡುತ್ತಾನೆ. ಸಂಕೋಚದಿಂದಾಗಿ ಏನಾಗುತ್ತಿದೆಯೋ ಅದರಲ್ಲಿ ಏನಾದರೂ ಪರಿವರ್ತನೆಯನ್ನು ಸೂಚಿಸುವುದಕ್ಕೆ ಅವನು ಗಾಬರಿಗೊಳ್ಳುತ್ತಾನೆ. ಕಾರಣ ಅವನಿಗೆ ತನ್ನ ವಿಚಾರಗಳು ಮತ್ತು ಅವುಗಳ ಆಧಾರಗಳ ಮೇಲೆ ನಂಬಿಕೆಯಿಲ್ಲ. ಇದರ ಬದಲು ಅವನು ಕೊಟ್ಟಿರುವ ಇತರೆ ಕಥನಗಳನ್ನು ಪರೀಕ್ಷಿಸುವ ಪ್ರಯತ್ನವನ್ನೂ ಮಾಡುವುದಿಲ್ಲ. ಆತ್ಮ ಸೌಂದರ್ಯ ಮತ್ತು ಆತ್ಮ ವಿಶ್ವಾಸ ಸುದೃಢವಾಗುವುದರಿಂದ ಮಾತ್ರವೇ ಅವನು ಪ್ರಪಂಚದೊಂದಿಗೆ ಜಗತ್ತಿನೊಂದಿಗೆ ತನ್ನ ಸಂಬಂಧಗಳನ್ನು ವ್ಯಾಪಕಗೊಳಿಸಬಲ್ಲ ಮತ್ತು ಜ್ಞಾನವೇನಿದೆ ಅದರಲ್ಲಿ ಸರಿ–ತಪ್ಪು ಹಾಗೂ ಏನನ್ನು ಕಲಿಯಬೇಕು ಮತ್ತು ಏನನ್ನು ಕಲಿಯಬಾರದು ಇದನ್ನು ತೀರ್ಮಾನಿಸಲು ಶಕ್ತನಾಗುತ್ತಾನೆ. ಇದೆಲ್ಲವನ್ನೂ ಭಾಷೆಯ ತರಗತಿಯಲ್ಲೂ ಮಾಡಬೇಕೆಂದಿದ್ದರೆ ಇದು ಹೇಗೆ ಆಗುತ್ತದೆ ಎಂಬುದನ್ನು ಗಮನವಿಟ್ಟು ಯೋಚಿಸಬೇಕಾಗುತ್ತದೆ. ಎನ್ ಪಿಇ 2020 ನಮ್ಮ ಶಾಲೆಗಳ ತರಗತಿಗಳಲ್ಲಿ ತಾರ್ಕಿಕ ರೂಪದಿಂದ ನಿರ್ಧಾರಿತವಾದ ನೈತಿಕತೆಯ ಬೆಳವಣಿಗೆಯಾಗಲಿ

ಮತ್ತು ಕಾರ್ಯಕಾರಣ ಸಂಬಂಧ ಅಥವಾ ಅದಕ್ಕೆ ವಿರುದ್ಧವಾದ್ದನ್ನು ಆಯ್ಕೆಮಾಡುವುದು ಇದರ ಮಹತ್ವದ ಭಾಗ ಎಂಬುದರ ಮೇಲೆ ಬಹಳ ಒತ್ತು ಮೀಡಲಾಗಿದೆ.

**ಸಾಂಸ್ಕೃತಿಕ ವಿವಿಧತೆ, ಸಹಕಾರ ಮತ್ತು ಬಹುತ್ವ**

ಎನ್ ಸಿಎಫ್ 2005 ಮತ್ತು ಎನ್ ಪಿ ಇ 2020 ಇದರಲ್ಲಿ ತರಗತಿಗಳಲ್ಲಿ ಸಾಂಸ್ಕೃತಿಕ ವಿವಿಧತೆ ಮತ್ತು ಸಂವೃದ್ಧಿಯ ಬಗ್ಗೆ ಆದರ, ಸಹಕಾರ ಮತ್ತು ಬಹುವಾದದ ಜೊತೆ ಜೊತೆಗೆ ಬಂಧುತ್ವಕ್ಕೆ ಬಲ ಸಿಗುವಂಥ ಸಂದರ್ಭಗಳು ಇರಬೇಕೆಂಬುದನ್ನು ಒತ್ತಿ ಹೇಳಲಾಗಿದೆ. ಇದರ ಮೇಲೆ ವಿಮರ್ಶೆ ಮತ್ತು ಕಾರ್ಯದ ಸಾಧ್ಯತೆ ಸಾಮಾಜಿಕ ಅಧ್ಯಯನದ ಹೊರತಾಗಿ ತರಗತಿಯಲ್ಲಿ ಹೆಚ್ಚು. ಇದರ ಬಗ್ಗೆ ಕೆಲಸ ಮಾಡಲು ಉನ್ನತ ಪ್ರಾಥಮಿಕ ತರಗತಿಗಳ ಕಾಲ ಉಚಿತವಾದ ಕಾಲ. ಭಾಷಾ ತರಗತಿಯಲ್ಲಿ ಮಕ್ಕಳ ಸುತ್ತುಮುತ್ತಿನ ಹಾಗೂ ವಿಶ್ವದ ಇನ್ನಿತರೆ ದೇಶಗಳ ಸಂಸ್ಕೃತಿಗಳು, ಸಂದರ್ಭಗಳು, ಮತ್ತು ಭಾಷೆಗಳು ಮೊದಲಾದವುಗಳ ಟೆಕ್ಸ್ಟ್ ಅನ್ನು ಪಾಠಮಾಡುವ ಭಾಷೆಗೆ ಅನುವಾದ ಮಾಡಿಸಬಹುದು. ಇದರ ಹೊರತಾಗಿ ಭಾವನೆಗಳ ದನಿ ಇರುವಂಥ ಪಾಠಗಳನ್ನು ಕೊಡಬಹುದು ಮತ್ತು ಮೂರನೆಯದಾಗಿ ಸೌಂದರ್ಯ ಬೋಧೆ ಕಂಡುಬರುವ ಪಾಠಗಳನ್ನು ಕೊಡಬಹುದು. ಈ ಇಡೀ ಪ್ರಯತ್ನದಲ್ಲಿ ಇವುಗಳಲ್ಲಿ ಬೇರೆ ಬೇರೆ ಜನಗಳ ಅಭಿಪ್ರಾಯಗಳು, ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಟೆಕ್ಸ್ಟ್ ಗಳ ಕೈ ಬರಹಗಳ ಬಗ್ಗೆ ಅವರ ನಡಾವಳಿ ಬೇರೆ ಬೇರೆಯಾಗಿರಬಹುದು. ತರಗತಿಯ ಅಂತಃ ಕ್ರಿಯೆಯ(ಸಂವಾದ) ಜೊತೆ ಜೊತೆಗೆ ನಮ್ಮ ಪಾಠಗಳೇನಿವೆ ಅವುಗಳಲ್ಲಿ ಒಂದು ವೈವಿಧ್ಯಪೂರ್ಣವಾದ ಸಕಾರಾತ್ಮಕ ಮತ್ತು ಸಹೃದಯ ದೃಷ್ಟಿಗಳು ಎಲ್ಲ ಮಕ್ಕಳಿಗೂ ದೊರೆಯಲಿ. ಯಾವ ರೀತಿಯ ಭಾವನೆಗಳಿಗೆ ಮಹತ್ವ ನೀಡಲಾಗುತ್ತದೆ ಎಂಬುದನ್ನೂ ಯೋಚಿಸಬೇಕಾಗುತ್ತದೆ. ಸಾಹಸ ಮತ್ತು ಹೊಡೆದಾಟ–ಅದು ಕಾಡು ಪ್ರಾಣಿಗಳದಾಗಿರಬಹುದು, ಅಥವಾ ಪರಸ್ಪರ ಶತ್ರುಗಳೆಂದುಕೊಂಡವರದಾಗಿರಬಹುದು–ಅದನ್ನು ಪುಸ್ತಕಗಳಲ್ಲಿ ಕೊಡೋಣವೆ? ಮಾನವೀಯ ಮತ್ತು ಸಂವಿಧಾನಾತ್ಮಕ ಮೌಲ್ಯಗಳು ಮತ್ತು ಮನುಷ್ಯನ ಸ್ವಭಾವದೊಂದಿಗಿನ ಸಂಬಂಧವನ್ನೂ ಒಂದು ದೂರಗಾಮಿ ದೃಷ್ಟಿಯಿಂದ ನೋಡಿರುವಂಥ ತಾರ್ಕಿಕ ನೈತಿಕತೆಗಳು ಕೇಂದ್ರದಲ್ಲಿ ಇರುವ ಹಾಗೆ ಯಾವ ರೀತಿಯ ಟೆಕ್ಸ್ಟ್ ಮತ್ತು ಅವುಗಳ ಮೇಲಿನ ಅಭ್ಯಾಸಗಳನ್ನು ನಾವು ಹೇಗೆ ಹೆಣೆಯೋಣ? ಎಲ್ಲ ಮಕ್ಕಳೂ ತಮ್ಮನ್ನು ತಾವೇ ಕಂಡುಕೊಳ್ಳುವುದರ ಬಗ್ಗೆಯೂ ಗಮನ ಕೊಡಬೇಕಾಗುತ್ತದೆ. ಅರ್ಥಾತ್ ಎಲ್ಲರಿಗೂ ಸೌಹಾರ್ದತೆ ಮತ್ತು ಸಕಾರಾತ್ಮಕ ದೃಷ್ಟಿಗಳನ್ನು ದೊರಕಿಸುವಂಥ ರೀತಿಯ ಟೆಕ್ಸ್ಟ್ ಗಳಾಬೇಕು. ಮತ್ತು ಅವು ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಬೆಳೆದುಬಂದಂಥ ಮಕ್ಕಳ ಬಗ್ಗೆ ಆಗಿರಬೇಕು.

ತರಗತಿಯಲ್ಲಿ ಚರ್ಚೆಯನ್ನು ನಡೆಸುವಂಥ .ಸಮಯದಲ್ಲಿ ಟೆಕ್ಸ್ಟ್ ಬಗ್ಗೆ ಅದರಲ್ಲಿ ವ್ಯಕ್ತವಾದ ಭಾವನೆಗಳು ಮತ್ತು ವಿಚಾರಗಳ ಬಗ್ಗೆ ಮಕ್ಕಳದ್ದಷ್ಟೇ ಅಲ್ಲದೆ ಅಧ್ಯಾಪಕರ ಅಭಿಪ್ರಾಯಗಳು ಒಂದೇ ಆಗಿರುವುದಿಲ್ಲ. ಆದ್ದರಿಂದ ಟೆಕ್ಸ್ಟ್ ಬಗ್ಗೆ ತಾರ್ಕಿಕ ರೀತಿಯಲ್ಲಿ ಚರ್ಚೆ ನಡೆಯಬೇಕೆಂಬ ನಿರ್ಣಯ ಮಹತ್ವದ್ದು. ವಿಶೇಷವಾಗಿ ಯಾರ ಬಗ್ಗೆ ಅಭಿಪ್ರಾಯಗಳಲ್ಲಿ ವೈವಿಧ್ಯ ಇರುವ ಸಂಭವ ಇರುತ್ತದೆಯೋ ಅಂಥವರ ಬಗ್ಗೆ ಚರ್ಚೆ ನಡೆಯುವುದು. ಒಂದು ವೇಳೆ ಭಾರತದ ಸಂದರ್ಭದಲ್ಲಿ ಯೋಚಿಸಿದರೆ ಭಾರತೀಯ ಸಮಾಜದ ಸವಾಲುಗಳನ್ನು ಕುರಿತಂತೆ ಯಾವ ರೀತಿಯ ಚರ್ಚೆ ಆಗಬೇಕು? ಈ ಪ್ರಶ್ನೆ ಆ ಕೂಡಲೇ ಮುಂದೆ ಬರುತ್ತದೆ. ತರಗತಿಯಲ್ಲಿ ವಿಭಿನ್ನ ಅಭಿಪ್ರಾಯಗಳು ಮತ್ತು ಮಗ್ಗುಲುಗಳು ಮಕ್ಕಳ ಮುಂದೆ ಬರುವಂಥ ಪರಿಸರ ನಿರ್ಮಾಣವಾಗಬೇಕು ಎಂಬುದು ಒಂದು ಮಗ್ಗುಲು. ಅವನು ಇವರುಗಳ ಮತ್ತು ಬೇರೆ ಬೆರೆ ಪಾತ್ರಗಳ ವ್ಯವಹಾರಗಳನ್ನು ಪರೀಕ್ಷಿಸಿ ಅವುಗಳಲ್ಲಿ ತನ್ನ ಲೆಕ್ಕಾಚಾರದಿಂದ ಕೆಲವು ಸರಿ ತೀರ್ಮಾನಗಳು ಕೆಲವು ತಪ್ಪು ಹೆಜ್ಜೆಗಳನ್ನು ಗುರುತಿಸಿ ಅದಕ್ಕೆ ತರ್ಕಗಳನ್ನು ರಚಿಸಲು ಸಮರ್ಥನಾಗಬೇಕು. ಇದೊಂದು ಸವಾಲಿನ ಕೆಲಸ. ಕಾರಣ ಶಾಲೆ ಒಂದು ವ್ಯವಸ್ಥೆಯಲ್ಲಿ ಇರುತ್ತದೆ ಮತ್ತು ಬೃಹತ್ ಸಮಾಜದಲ್ಲಿ ಸಾಮಾಜಿಕ ರಾಜಕೀಯ ಸಮೂಹ ಕಾರ್ಯ ಮಾಡುತ್ತಿರುವವರ ಪ್ರಭಾವದ ಗಮನದ ತರಗತಿಯಲ್ಲಿ ಶಿಕ್ಷಕನಾದವನು ಏನನ್ನು ಮಾಡಿಸಲು ಸಾಧ್ಯ, ಪಠ್ಯಪುಸ್ತಕದಲ್ಲಿ ಏನನ್ನು ಇಡಲು ಸಾಧ್ಯ ಈ ಎಲ್ಲವೂ ತೊಡಕಿನ ಪ್ರಶ್ನೆಗಳಾಗಬಹುದು. ತರಗತಿಯಲ್ಲಿ ಮಕ್ಕಳ ಹಿನ್ನೆಲೆ ಏನಿದೆ ಅದರಲ್ಲಿ ಕೂಡ ವಿಭಿನ್ನತೆಯ ಜೊತೆ ಜೊತೆಯಲ್ಲಿ ಟೆನ್ ಷನ್(ಕರ್ಷಣೆಯೂ) ಉಂಟಾಗುವ ಕಷ್ಟವೂ ಇದೆ. ಇದೆಲ್ಲವೂ ನಡೆಯುತ್ತ ಈ ಎಲ್ಲ ಸಂಗತಿಗಳ ಮೇಲೆ ತರಗತಿಯಲ್ಲಿ ಯಾವ ರೀತಿಯಲ್ಲಿ ವಿಮರ್ಶೆ ಸಾಧ್ಯವಾಗಬಹುದು ಎಂಬುದು ಒಂದು ಜಟಿಲ ಸಮಸ್ಯೆ. ಇಷ್ಟಾದರೂ ಇದರ ಮೇಲೆ ಚರ್ಚೆ ನಡೆಯಬೇಕು. ಇದರಲ್ಲಿ ಯಾವ ರೀತಿಯ ಅವಕಾಶಗಳನ್ನು ರೂಪಿಸಬೇಕಾದ ಸಾಧ್ಯತೆ ಇದೆ ಮತ್ತು ಇದರ ವಿಧಾನ ಯಾವುದಾಗಿರಬೇಕು ಎಂಬುದನ್ನು ಶಿಕ್ಷಕರ ಜೊತೆ ಈ ವಿಷಯಗಳ ಬಗ್ಗೆ ಮಾತು–ಕತೆ ನಡೆಯಬೇಕಾದ ಅಗತ್ಯವಿದೆ.

ಶಿಕ್ಷಕರೂ ಇದೇ ಸಮಾಜದ ಭಾಗ ಮತ್ತು ಅವರೂ ಎಲ್ಲ ಬಗೆಯ ಪೂರ್ವಗ್ರಹಗಳು ಮತ್ತು ಮನಃಸ್ಥಿತಿಗಳೊಂದಿಗೇ ಬರುತ್ತಾರೆ ಎಂಬ ಕಾರಣಕ್ಕಾಗಿ ಇದು ಅಗತ್ಯ. ಆದ್ದರಿಂದ ಈ ವಿಷಯಗಳ ಬಗ್ಗೆ ಸಹೃದಯತೆ, ರಚನಾತ್ಮಕ ಮತ್ತು ಮಾನವೀಯ ಮೌಲ್ಯಗಳು ಮತ್ತು ಪ್ರಕೃತಿಯ ಬಗೆಗೆ ಸಂವೇದನಾಶಿಲತೆಯ ಬೆಳಕಿನಲ್ಲಿ ಮುಕ್ತವಾಗಿ ಎಲ್ಲ ಹಂತದಲ್ಲಿ ಮಾತುಕತೆ ಅವಶ್ಯಕ.

**ನೈತಿಕತೆ, ವಿವಿಧತೆ ಮತ್ತು ಸಮಕಾಲೀನತೆ**

ಮೇಲೆ ಚರ್ಚಿಸಲಾದ ವಿಷಯಗಳೆಲ್ಲಕ್ಕೂ ವಿಶಿಷ್ಟ ಉದಾಹರಣೆಗಳನ್ನು ನೀಡುವುದು ಕಷ್ಟ. ಈ ಉದಾಹರಣೆಗಳನ್ನು ಮಕ್ಕಳ ಸಂದರ್ಭದಲ್ಲಿ ಮತ್ತು ಅವರು ಈಗ ಇರುವ ಪರಿಸ್ಥಿತಿಯಲ್ಲಿ ಮತ್ತು ರಚಿಸಬೇಕಾಗುತ್ತದೆ. ಆ ಕಾಲದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ಪ್ರಸ್ತುತವಾದ ಸವಾಲುಗಳ ಆಧಾರದ ಮೇಲೆಯೇ ಅವುಗಳ ಬಗೆಯನ್ನು ನಿರ್ಣಯಿಸಲು ಸಾಧ್ಯವಾಗುತ್ತದೆ. ಆದರೆ ಒಂದು ಮಾತಂತೂ ಸ್ಪಷ್ಟವಿದೆ. ಅದೆಂದರೆ ಕೇವಲ ಪಠ್ಯಪುಸ್ತಕದಲ್ಲಿ ಕೊಟ್ಟಿರುವ ಕೆಲಸಗಳಿಂದ ಭಾಷಾ ಶಿಕ್ಷಣದ ಕೆಲಸವು ಮುಗಿಯುವುದಿಲ್ಲ. ಅರಲ್ಲಿ ಶಿಕ್ಷಕನಿಗೆ ಹೊಸ ಪಾಠಗಳನ್ನು ಆಯ್ಕೆಮಾಡುವ ಸ್ವಾತಂತ್ರ್ಯ, ಆ ಪಾಠಗಳನ್ನು ಭಾಷಾ ಶಿಕ್ಷಣದಲ್ಲಿ ಸೇರಿಸುವ ಸ್ವಾತಂತ್ರ್ಯ, ಮತ್ತು ಮಕ್ಕಳಿಗೂ ಅವರಿಗೆ ಆಸಕ್ತಿ ಇರುವ ಪಾಠಗಳನ್ನು ತರಗತಿಯಲ್ಲಿ ಪ್ರಸ್ತುತಪಡಿಸುವ ಸ್ವಾತಂತ್ರ್ಯವಿರುವುದು ಅಗತ್ಯ. ಈ ಸಾಧ್ಯತೆ ಈ ಇಡೀ ಪ್ರಕ್ರಿಯೆಯಲ್ಲಿ ನೆರವಾಗುತ್ತದೆ. ಎನ್ಇಪಿ 2020ರಲ್ಲೂ ಇದರ ಸೂಚನೆ ಇದೆ. ನಾವು ಸಾಮಾನ್ಯವಾಗಿ ಸರಿಯಾದ ಮೌಲ್ಯಗಳನ್ನು ಬೆಳೆಸುವಂಥ ಸಾಮರ್ಥ್ಯವಿರುವ ಪಾಠಗಳನ್ನು ಕೊಡಬೇಕೆಂದು ಯೋಚಿಸುತ್ತೇವೆ. ಆದರೆ ಈ ದೃಷ್ಟಿ ಇಟ್ಟುಕೊಂಡು ಹೊರಟಲ್ಲಿ ಎಲ್ಲಕ್ಕಿಂತ ಮುಖ್ಯವಾಗಿ ಅವರಲ್ಲಿ ತಾರ್ಕಿಕ ನೈತಿಕತೆ ಮತ್ತು ಸರಿ–ತಪ್ಪುಗಳನ್ನು ತಾವೇ ನಿರ್ಣಯಿಸುವ ಸಾಮರ್ಥ್ಯ ರೂಪಿತವಾಗುವುದಿಲ್ಲ. ಅದನ್ನು ಬೆಳವಣಿಗೆಯ ಅವಕಾಶವಾಗಿ ಮಾಡುವ ಸಾಧ್ಯತೆ ತಪ್ಪಿಹೋಗುತ್ತದೆ.

ಇದರ ಬಗ್ಗೆ ವಿಚಾರಮಾಡುತ್ತಿರುವಾಗ ಇನ್ನು ಕೆಲವು ಸಂಗತಿಗಳು ಯೋಚಿಸಲರ್ಹವಾಗಿವೆ. ಆ ಪಾಠವನ್ನು ಕಲಿಯುವ ಮತ್ತು ಕಲಿಸುವ ಬಾಲಕ ಮತ್ತು ಶಿಕ್ಷಕ ಆ ಪಾಠವನ್ನು ಹೇಗೆ ಅರ್ಥಮಾಡಿಕೊಳ್ಳುತ್ತಾರೆಂದು, ಹೇಗೆ ಯೋಚಿಸಲಾಗಿದೆಯೋ ಸರಿಸುಮಾರು ಅದೇ ರೀತಿಯಲ್ಲಿ ಅದರಲ್ಲಿ ನಿಹಿತವಾಗಿರುವ ಅರ್ಥವನ್ನು ತಿಳಿಯುತ್ತಾರೆಯೆ ಮತ್ತು ಹೊರಡಿಸುತ್ತಾರೆಯೆ ಎಂಬುದೇ ಈಗಿನ ಸಂಗತಿ. ತಮ್ಮ ತಮ್ಮ ಲೆಕ್ಕಾಚಾರಕ್ಕೆ ತಕ್ಕಂತೆ ಎಲ್ಲ ಬಗೆಯ ಭಾವನೆಗಳು, ಮೌಲ್ಯಗಳು ಇರುವ ಒಂದು ಸರಿಯಾದ ಟೆಕ್ಸ್ಟ್ ಇಟ್ಟುಬಿಡುವುದು ಇದರಿಂದ ಈ ಎಲ್ಲ ವಿಷಯಗಳನ್ನು ಕುರಿತು ಮಾತುಕತೆಯಾಡುವ ಅವಶ್ಯಕತೆ ಪೂರ್ತಿಯಾಗಿಬಿಡುತ್ತದೆ ಎಂಬಷ್ಟು ಅದು ಸರಳ ವಿಷಯವಲ್ಲ. ಬೇರೆ ಬೇರೆ ಸಾಂಸ್ಕೃತಿಕ ಪರಿಸರಗಳು, ಬೇರೆ ಬೇರೆ ಭಾಷೆಗಳನ್ನು ಚೆನ್ನಾಗಿ ಗಮನದಲ್ಲಿಟ್ಟುಕೊಂಡಿರುವಂಥ ಎಲ್ಲ ವಿವಿಧತೆಗಳು ಇರುವ ಟೆಕ್ಸ್ಟ್ ಗಳು ಎಲ್ಲಿಯವರೆಗೆ ಸಿದ್ಧವಾಗುವುದಿಲ್ಲವೋ, ತರಗತಿಗಳಲ್ಲಿ ಅವುಗಳ ಬಗ್ಗೆ ಸಂವಾದ ಮತ್ತು ವಿವಾದ ನಡೆಯುವುದಿಲ್ಲವೋ ಅವರು ಸರಿಯಾಗಿ ತರ್ಕಿಸುವುದು ಮತ್ತು ವಿಶ್ಲೇಷಿಸುವುದನ್ನು ಕಲಿತಿದ್ದಾರೆಯೆ, ಅವರು ಈಗ ತಮ್ಮ ನೈತಿಕ ಬೆಳವಣಿಗೆಯ ಪಡಿಯಚ್ಚಿನ ಆಧಾರಗಳಾಗಿದ್ದಾರೆಯೆ ಎಂಬ ಈ ಯಾವ ಬಗೆಯ ತೀರ್ಮಾನವನ್ನು ಕೊಟ್ಟಿರುವ ಟೆಕ್ಸ್ಟ್ ನಿಂದ ಅಲ್ಲಿಯವರೆಗೆ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ ಎಂದು ತಿಳಿಯುವುದು ಮಹತ್ವದ್ದು.

ಇಂದಿನ ದಿನಗಳಲ್ಲಿ ಭಾಷೆ ಮತ್ತು ಇತರೆ ವಿಷಯಗಳನ್ನು ಕುರಿತ ಪಠ್ಯಪುಸ್ತಕಗಳಲ್ಲಿ ಯಾವ ಮೌಲ್ಯಗಳ ಆಕೃತಿಯನ್ನು ಪ್ರಸ್ತುತಪಡಿಸಲಾಗುತ್ತಿದೆಯೋ ಅದು ಉಚ್ಚ ವರ್ಗದ ಅಭಿಪ್ರಾಯಗಳಿಂದ ನಿರ್ದೇಶಿಸಲ್ಪಟ್ಟಿದೆ ಎಂಬುದನ್ನು ಸೂಚಿಸುವುದು ಅಗತ್ಯ. ಯಾವುದನ್ನು ಉಚ್ಚ ಕುಲದವರು ಸರಿ ಎಂದು ತಿಳಿದಿದ್ದಾರೆಯೋ ಅಂಥ ಅಭಿಪ್ರಾಯಗಳಿಂದ ಸಂಚಾಲಿತವಾಗಿದೆ. ಅಷ್ಟೇ ಅಲ್ಲ ಎಲ್ಲೋ ಒಂದು ಕಡೆ ಅವರ ಜೀವನ ಶೈಲಿ ಕೂಡ ಸೇರಿಬಿಡುತ್ತದೆ. ಇದರಲ್ಲಿ ವ್ಯಕ್ತಪಡಿಸಲಾದ ಮಾತುಗಳಿಗೆ ಆಧಾರ ಉಚ್ಚ ಕುಲ ಮತ್ತು ಉಚ್ಚವರ್ಗದಿಂದ ಬಂದಿರುವವರಿಗೆ ಸಹಜವಾದ್ದು. ಮೊದಲನೆಯದಾಗಿ ಇದರಿಂದ ಉಳಿದ ಮಕ್ಕಳು ಬೇರ್ಪಟ್ಟ (ಬೇರೆಯಾದಂಥ) ಭಾವಕ್ಕೆ ಪಕ್ಕಾಗುತ್ತಾರೆ ಎನ್ನುವುದು. ಎರಡನೆಯದಾಗಿ ತಾರ್ಕಿಕ ರೀತಿಯಲ್ಲಿ ನೈತಿಕತೆಯ ಬೆಳವಣಿಗೆಗೆ ಅವಶ್ಯಕವಾದ ತಾರ್ಕಿಕ ತಿಳಿವಳಿಕೆ ಯಾವ ಹಂತದಲ್ಲೂ ರೂಪಿತಗೊಳ್ಳುವುದಿಲ್ಲ. ಹಾಗಾದರೆ ಸ್ವಲ್ಪ ಮಟ್ಟಿನ ಮಿಶ್ರಿತ ರೀತಿಯ ಪಾಠವನ್ನು ಹೇಗೆ ವ್ಯವಸ್ಥೆಗೊಳಿಸುವುದು? **ಪರಾಗಮನದ**(?) ಜೀವನ ಶೈಲಿಯನ್ನೂ ಮಕ್ಕಳು ತಿಳಿಯಲು ಸಾಧ್ಯವಾಗುವ, ಅದನ್ನೂ ಗೌರವಿಸುವ ಭಾವ ಬರುವ ಹಾಗೆ ಅದರ ಬಗ್ಗೆಯೂ ಸಂವಾದ ನಡೆಯಲಿ. ಮತ್ತು ಒಂದು ರೀತಿಯ ಏಕಾಂಗಿ ಸಮಾಜ ಸ್ವರೂಪವನ್ನು ಸ್ಥಾಪಿಸುವಂಥ ಪ್ರಯತ್ನದ ಪೂರಾ ಪ್ರಕ್ರಿಯೆಯಿಂದ ನಾವು ಉಳಿದುಕೊಳ್ಳಬೇಕು.

ಭಾಷಿಕ ಸಾಮರ್ಥ್ಯದಿಂದ ನಾವೊಂದು ವೇಳೆ ಅನೇಕ ಬಗೆಯ ಭಾಷೆಗಳಿಗೆ ತರಗತಿಗಳಲ್ಲಿ ಎಡೆಕೊಟ್ಟಿದ್ದೇ ಆದರೆ ಅದರಿಂದ ಮಕ್ಕಳ ಸಂಸ್ಕೃತಿಗೆ ಗೌರವ ಸಲ್ಲುತ್ತದೆ ಅದಕ್ಕೆ ಎಡೆ ಸಿಗುತ್ತದೆ ಎಂಬ ಆಯಾಮದೊಂದಿಗೂ ಈ ಸಂಗತಿ ತಳುಕುಹಾಕಿಕೊಂಡಿದೆ. ಆದರೆ ಇನ್ನೊಂದು ಕಡೆ ಬೇರೆ ಬೇರೆ ಭಾಷೆಗಳ ನಡುವೆ ಸಂಬಂಧ ಮತ್ತು ಯಾವುದೇ ಭಾಷೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಮಗುವಿನ ಸಾಮರ್ಥ್ಯದಲ್ಲೂ ನಾವು ಬೆಳವಣಿಗೆ ಸಾಧಿಸುತ್ತೇವೆ. ಇದು ವೈಚಾರಿಕ ಮತ್ತು ಸಾಂಸ್ಕೃತಿಕ ವೈವಿಧ್ಯವನ್ನೂ ಮಕ್ಕಳ ಮುಂದೆ ಇರಿಸಿಯೇ ಬಿಡುತ್ತದೆ. ಆದರೆ ವಿವಿಧ ರೀತಿಯಲ್ಲಿ ಯೋಚಿಸುವ ಮತ್ತು ವಿಭಿನ್ನ ದೃಷ್ಟಿಗಳಿಂದ ಮುಖಾಮುಖಿಯಾಗುವಲ್ಲಿ ನೆರವಾಗುತ್ತದೆ. ಯಾವುದಾದರೂ ಟೆಕ್ಸ್ಟ್ ಅನ್ನು ಒಂದು ಪ್ರಕಾರದಿಂದ(ರೀತಿಯಿಂದ) ಇನ್ನೊಂದು (ರೀತಿಯಲ್ಲಿ) ಪ್ರಕಾರದಲ್ಲಿ ಬರೆಯುವುದು, ಆ ಭಾಷೆಯಲ್ಲಿ ಅದರ ಸಾರವನ್ನು ಬರೆಯುವುದು ಆ ಸಂಸ್ಕೃತಿಯಿಂದ ಹೊಸ ಉದಾಹರಣೆಗಳನ್ನು ಆಯ್ಕೆಮಾಡಿಕೊಂಡು ಅದನ್ನು ಪ್ರಸ್ತುತಪಡಿಸುವುದು, ಇದೆಲ್ಲವೂ ಸಂಸ್ಕೃತಿ ಕುರಿತಂತೆ ದೃಷ್ಟಿಯನ್ನು ವಿಸ್ತೃತಗೊಳಿಸುತ್ತದೆ ಮತ್ತು ಭಾಷಿಕ ಸಾಮರ್ಥ್ಯದಲ್ಲಿ ಬೆಳವಣಿಗೆಯನ್ನು ತರುತ್ತದೆ.

**ಅನುವಾದ: ಭಾಷೆಗಳಲ್ಲಿ ಮತ್ತು ಪ್ರಕಾರಗಳಲ್ಲಿ**

ಅನುವಾದವನ್ನು ಒಂದು ಯಾಂತ್ರಿಕ ಪ್ರಕ್ರಿಯೆಯಂತೆ ಭಾವಿಸಿ ಶಬ್ದದ ಅರ್ಥಗಳನ್ನು ಹುಡುಕಿ ಶಬ್ದಗಳನ್ನು ಅಳವಡಿಸುವುದು ಅನುವಾದವೆಂದು ಸಾಮಾನ್ಯವಾಗಿ ತಿಳಿಯಲಾಗುತ್ತದೆ. ಅನುವಾದ ಎಂಥ ಪ್ರಕ್ರಿಯೆಯೆಂದರೆ ಅರ್ಥವನ್ನು ತಿಳಿದುಕೊಂಡು ಅದನ್ನು ಹೊಸ ರೀತಿಯಿಂದ ಬರೆಯುವ ಒಂದು ಮಹತ್ವದ ಹೆಜ್ಜೆ. ಆದ್ದರಿಂದ ಅನುವಾದದ ಸರಿಯಾದ ಬಳಕೆ ಎಂದರೆ ಭಾಷಿಕ ಸಾಮರ್ಥ್ಯದ ಬೆಳವಣಿಗೆ, ಓದುವ ಸಾಮರ್ಥ್ಯದ ಬೆಳವಣಿಗೆ ಮತ್ತು ಬರಹದ ಸಾಮರ್ಥ್ಯದ ಬೆಳವಣಿಗೆಯಲ್ಲಿ ಒಂದು ಮಹತ್ವದ ಭಾಗವಾಗಬಲ್ಲುದು. ಒಂದೇ ಷರತ್ತೆಂದರೆ ಸರಿಯಾದ ರೀತಿಯಲ್ಲಿ ಮಾಡಬೇಕು ಅಷ್ಟೆ. ಸಾಂಸ್ಕೃತಿಕ ವಿಭಿನ್ನತೆಗೆ ಮಹತ್ವ ನೀಡಿ ಅನುವಾದ ಮಾಡಿದಾಗ ಮಾತ್ರ ಇದು ಪ್ರಯೋಜನಕರವಾವಾಗಬಲ್ಲುದು. ಅರ್ಥಾತ್ ಬೇರೆ ಬೇರೆ ಭಾಷೆಗಳ ಕಥೆಗಳು, ಮಕ್ಕಳು ಮನೆಯಿಂದ ತರುವಂಥ ಬೇರೆ ಬೇರೆ ಪರಿಸ್ಥಿತಿಗಳಲ್ಲಿಯ ಕಥೆಗಳನ್ನು ತೆಗೆದುಕೊಂಡು ಅವುಗಳ ಬಗ್ಗೆ ಚರ್ಚೆ ಮಾಡಲಿ. ಈ ಕಥೆಗಳನ್ನು ಬೇರೆ ಭಾಷೆಯಲ್ಲಿ ಅನುವಾದಿಸಿದರೆ ಅದರಲ್ಲಿ ವಿಚಾರ ಮಾಡುವ , ಯೋಚಿಸುವ ಬೇರೆ ಬೇರೆ ರೀತಿಗಳನ್ನು ಕೂಡ ಮಕ್ಕಳಿಗೆ ಪರಿಚಯ ಮಾಡಿಸಬಹುದು. ಒಟ್ಟಾರೆ ಭಾಷಿಕ ತರಗತಿಗಳು ಏನಿವೆ ಅವುಗಳಲ್ಲಿ ಪಾಠಗಳ ವಿವಿಧತೆ, ಕೇವಲ ಪಠ್ಯಪುಸ್ತಕಗಳ ಮಾಧ್ಯಮದಿಂದ ಪೂರ್ಣಗೊಳ್ಳುವುದಿಲ್ಲ. ಅದರಲ್ಲಿ ಮಕ್ಕಳು ಮತ್ತು ಶಿಕ್ಷಕರ ಹಿನ್ನೆಲೆ, ಅವರ ಬುದ್ಧಿಯಿಂದ ಹೊರಬರುತ್ತಿರುವ ಕಥೆಗಳು, ಕವಿತೆಗಳು ಮತ್ತು ಪಾಠಗಳು ಮಹತ್ವಪೂರ್ಣವಾದವು.

ಬಹುಶಃ ಮಹತ್ವಪೂರ್ಣವಾದ ಇನ್ನೊಂದು ಮಗ್ಗುಲು ಎಂದರೆ ಭಾಷಾ ಪ್ರಕಾರಗಳಲ್ಲಿ ಒಂದು ಪ್ರಕಾರದಿಂದ ಇನ್ನೊಂದು ಪ್ರಕಾರಕ್ಕೆ ಪರಿವರ್ತಿಸುವ ಅಭ್ಯಾಸ ಮಾಡುವ ಸಂಭಾವಿತ ರೀತಿ. ಸಾಮಾನ್ಯವಾಗಿ ಕವಿತೆ, ನಾಟಕ, ಮತ್ತು ಕಥೆಗಳನ್ನು ಕೇವಲ ಕವಿ, ನಾಟಕಕಾರ ಮತ್ತು ಕಥೆಗಾರ ಮಾತ್ರ ಬರೆಯಬಲ್ಲರು ಎಂಬುದು ನಮ್ಮ ಸಾಮಾನ್ಯ ಗ್ರಹಿಕೆ. ಆದರೆ ಕವಿ, ಕಥೆಗಾರ ಮತ್ತು ನಾಟಕಕಾರರು ಬಹಳಷ್ಟು ಪರಿಷ್ಕರಿಸುವ ಪ್ರಯತ್ನಗಳ ನಂತರವಷ್ಟೇ ತಮ್ಮ ಕವಿತೆ, ಕಥೆ ಮತ್ತು ನಾಟಕಗಳನ್ನು ಬೇರೆಯವರ ಮುಂದೆ ಪ್ರಸ್ತುತ ಪಡಿಸುವ ರೀತಿಯಲ್ಲಿ ರಚಿಸಿರುತ್ತಾರೆ. ಭಾಷೆಯು ಕೇವಲ ವಿಚಾರಗಳು, ಭಾವನೆಗಳು, ಅನುಭವಗಳು, ವಿಶ್ಲೇಷಣೆಗಳು, ಮೊದಲಾದ ಅವರ ಅಭಿವ್ಯಕ್ತಿಗಳನ್ನು ದೀರ್ಘವಾಗಿ ಬಹಳ ದೂರದವರೆಗೂ ಪಸರಿಸುವ ಮಾಧ್ಯಮವಲ್ಲ, ಬದಲಿಗೆ ಅವರಿವರಿಂದ ಸಣ್ಣ ಸಣ್ಣ ಮಾತುಗಳು, ಸಣ್ಣ ಸಣ್ಣ ಘಟನಾಕ್ರಮಗಳು, ಮತ್ತು ಸಣ್ಣ ಸಣ್ಣ ಅನುಭವಗಳು ಮತ್ತು ಸಮರುಖಾಯಿಷಿಗಳು(ವಿವರಗಳು) ಮತ್ತು ವಿಚಾರಗಳನ್ನು ಹಂಚುವ ಮಾಧ್ಯಮವೂ ಹೌದು. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಗೂ, ಪ್ರತಿಯೊಬ್ಬ ಹುಡುಗನಿಗೂ ಬರೆಯುವ ಮತ್ತು ಬೇರೆ ಬೇರೆ (ವಿಧಗಳಲ್ಲಿ) ಪ್ರಕಾರಗಳಲ್ಲಿ ಅಭಿವ್ಯಕ್ತಿ ಗೊಳಿಸುವ ಅವಕಾಶವಿರಬೇಕು. ಈ ಅವಕಾಶಗಳ ಸಂದರ್ಭಗಳಲ್ಲಿ ಹುಡುಗ ಸ್ಪಷ್ಟವಾಗಿ ಹೇಳಲಿ ಎಂಬುದರ ಮೇಲೆ ಒತ್ತು ಇರಬೇಕೇ ಹೊರತು, ಸರಿಯಾದ ವ್ಯಾಕರಣ, ಸರಿಯಾದ ಲಯ ಮತ್ತು ಸರಿಯಾದ ಕ್ರಮದಲ್ಲಿ ಶಬ್ದಗಳನ್ನು ಹೇಳುವುದರ ಮೇಲೆ ಅಲ್ಲ. ಅವರ ಅಭಿವ್ಯಕ್ತಿಗಳಲ್ಲಿ ಎರಡು–ಮೂರು ಭಾಷೆಗಳ ಶಬ್ದಗಳೂ ಇರುವ ಸಾಧ್ಯತೆ ಇದೆ. ಇದೇ ರೀತಿ ಅವನು ಬರೆಯುವಾಗ ಅದರಲ್ಲಿ ಹಲವು ಬಗೆಯ ಮಿಶ್ರಣಗಳಿರಬಹುದು. ಆದರೆ ಅವನು ಬರೆದದ್ದನ್ನು ಮತ್ತೆ ಮತ್ತೆ ನೋಡಿದಾಗ ಅದನ್ನು ಪರಿಷ್ಕರಿಸಲೂ ಸಮರ್ಥನಾಗುತ್ತಾನೆ. ಭಾಷೆಯ ಬೆಳವಣಿಗೆಯಲ್ಲಿ ಇನ್ನೊಂದು ಭಾಷೆಯಿಂದ ಶಬ್ದಗಳನ್ನು ಸ್ವೀಕರಿಸುವುದು ಯಾವಾಗಿನಿಂದಲೂ ಶಬ್ದಗಳನ್ನು ತೆಗೆದುಕೊಳ್ಳುವ(ಸ್ವೀಕರಿಸುವ) ಭಾಷೆಯ ಬೆಳವಣಿಗೆಯಲ್ಲಿ ಮಹತ್ವದ ಮಗ್ಗುಲು. ಇದು ಉಚಿತವಾದ್ದು ಎಂದು ಒಪ್ಪಿ

ಮುಂದುವರಿಯಬೇಕು. ಭಾಷೆಯ ಅಭ್ಯಾಸ ಮಾಡಿಸುವಾಗ ಯಾವ ಸಂಗತಿಯನ್ನು ಮಹತ್ವದ್ದು ಎಂದು ನಾವು ಒಪ್ಪಿದ್ದೇವೆ ಎಂಬುದನ್ನು ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ಇದರ ಹೊರತಾಗಿ ನಾವು ಹುಡುಗನ ಕೆಲಸವನ್ನು ಯಾವ ದೃಷ್ಟಿಯಿಂದ ಅಳೆಯುತ್ತೇವೆ(ಪರೀಕ್ಷಿಸುತ್ತೇವೆ) ಮತ್ತು ಆ ಅಳೆಯುವುದರ ಮೇಲೆ ಅವನಿಗೆ ಫೀಡ್ ಬ್ಯಾಕ್ ಅನ್ನು ಯಾವ ರೀತಿಯಲ್ಲಿ ನೀಡುತ್ತೇವೆ ಎಂಬುದನ್ನೂ ಯೋಚಿಸುವುದು ಅವಶ್ಯಕ. ಇದನ್ನು ನಾವು ಗಮನದಲ್ಲಿಟ್ಟುಕೊಂಡದ್ದೇ ಆದರೆ ಅದರಿಂದ ಹುಡುಗನ ಸಾಮರ್ಥ್ಯದ ಬೆಳವಣಿಗೆ ಉತ್ತಮ ರೀತಿಯಲ್ಲಿ ಆಗುತ್ತದೆ ಮತ್ತು ಅವನು ಅದರಲ್ಲಿ ತನ್ನನ್ನು ತಾನೇ ಹೆಚ್ಚು ಸಮರ್ಥನಾಗಿ ಮತ್ತು ಆತ್ಮ ವಿಶ್ವಾಸದಿಂದ ಕೂಡಿದವನಾಗಿ ಕಂಡುಕೊಳ್ಳುತ್ತಾನೆ. ಭಾಷೆಯು ಅನೇಕ ರೀತಿಯಲ್ಲಿ ಆತ್ಮ ಸೌಂದರ್ಯವನ್ನು ರೂಪಿಸಿಕೊಳ್ಳುವಲ್ಲಿ ನೆರವಾಗುತ್ತದೆ ಮತ್ತು ಈ ಆತ್ಮ ಸೌಂದರ್ಯದಲ್ಲಿ ಒಂದು ದೊಡ್ಡ ಭಾಗ ಸಾಮರ್ಥ್ಯದ್ದು. ಒಂದು ವೇಳೆ ಹುಡುಗನು ಭಾಷೆಯನ್ನು ಬಳಸುವುದನ್ನು ಮತ್ತು ಪಾಠವನ್ನು ಅರ್ಥಮಾಡಿಕೊಂಡು ಓದುವುದನ್ನು ಕಲಿಯುತ್ತಾನಾದರೆ ಎಲ್ಲ ರೀತಿಯಲ್ಲೂ ಅವನ ಭಾಷಿಕ ಸಾಮರ್ಥ್ಯದ ವೃದ್ಧಿಯಾಗುತ್ತದೆ. ಉಳಿದ ವಿಷಯಗಳಲ್ಲಿ ಅವನ ಸಾಮರ್ಥ್ಯ, ಜೀವನದಲ್ಲಿ ಉಳಿದ ಜನರೊಂದಿಗೆ ವಿಮರ್ಶಿಸುವ ಸಾಮರ್ಥ್ಯ ಮತ್ತು ಸಮಾಜದಲ್ಲಿ ಬದುಕಿ ಬಾಳುವ ಸಾಮರ್ಥ್ಯದಲ್ಲೂ ಉನ್ನತಿಯಾಗುತ್ತದೆ. ತರಗತಿಯಲ್ಲಿ ಭಾಷೆಯ ಅಧ್ಯಯನ ಮತ್ತು ಅಧ್ಯಾಪನ ಮಕ್ಕಳಿಗೆ ತಾವು ಬರೆದ ಸಾಮಗ್ರಿ, ತಾವು ಬಳಸಿದ ಭಾಷೆಗಳ ಮಿಶ್ರಣವಾಗಬಹುದು ಎಂದು ಮಕ್ಕಳಿಗೆ ಅನ್ನಿಸಬೇಕು ಎಂಬ ಯೋಚನೆಯಿಂದ ನಡೆಯಬೇಕು. ಅವರ ಕೆಲಸದಲ್ಲಿ ಬೆಳವಣಿಗೆಯಾಗುತ್ತಿದೆ ಎಂಬುದನ್ನು ಅವರು ಕಂಡುಕೊಳ್ಳಲಿ. ಅವನಲ್ಲಿ ಮೂಲಭಾವ ಬರುತ್ತಿದೆ, ಮತ್ತು ಅವನಲ್ಲಿ ಅವನು ಅಭಿವ್ಯಕ್ತಿಸುವ ಸಾಮರ್ಥ್ಯದಲ್ಲಿ, ಆಲೋಚಿಸುವ ಸಾಮರ್ಥ್ಯದಲ್ಲಿ ಸುಧಾರಣೆ ಮತ್ತು ವೃದ್ಧಿಯಾಗುತ್ತಿದೆ ಎಂದು ಅವನಿಗೆ ಅನ್ನಿಸಬೇಕು. ಹುಡುಗನು ತನ್ನ ಭಾಷೆಯ ವಿಷಯಕ್ಕೆ ಒಂದು ಸಕಾರಾತ್ಮಕವಾದ ಅಭಿಪ್ರಾಯವನ್ನು ಇಟ್ಟುಕೊಳ್ಳುತ್ತಾನೆ ಮತ್ತು ತನಗಾಗಿ ಸಮಾಜದಲ್ಲಿ, ಶಾಲೆಯಲ್ಲಿ ಎಲ್ಲ ಕಡೆ ಮುಂದುವರಿಯುವ ಅವಕಾಶವಿದೆ ಮತ್ತು ತಾನು ಯಾವುದೇ ರೀತಿಯ ವಿಚಾರಗಳಲ್ಲಿ ಬೇರೆ ಯಾರಿಗಿಂತಲೂ ಕಮ್ಮಿಯಲ್ಲ ಎಂದು ಅವನಿಗೆ ಅನ್ನಿಸುತ್ತದೆ ಎಂಬ ಕಾರಣಕ್ಕಾಗಿಯೂ ಈ ಬಗೆಯ ಆತ್ಮವಿಶ್ವಾಸ ಅಗತ್ಯ.

****************